## ಯಾವುದಕ್ಕೆ ಪ್ರವೇಶಾವಕಾಶ?

## ಭಾರತದ ಶಾಲೆಗಳಲ್ಲಿನ  ಪ್ರವೇಶಾವಕಾಶ, ವಿಭಿನ್ನತೆ ಮತ್ತು ಭಾಗವಹಿಸುವಿಕೆ

### 1. ಪೀಠಿಕೆ

ಶಿಕ್ಷಣ ಒದಗಿಸುವವರ ವಿಭಿನ್ನತೆಯಿರುವಂತಹ ಭಾರತದಲ್ಲಿ, ಪ್ರತಿಯೊಂದು ಮಗುವೂ ಪ್ರಾಥಮಿಕ ಶಿಕ್ಷಣಕ್ಕೆ ಸಮಾನ ಪ್ರವೇಶಾವಕಾಶ ಹೊಂದಿದೆಯೇ ಎಂದು ಈ ಲೇಖನವು ಪ್ರಶ್ನಿಸುತ್ತದೆ. ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ (1 ರಿಂದ 5ನೇ ತರಗತಿವರೆಗೆ) ದ 'ಪೂರೈಕೆ ಭಾಗ' ವನ್ನು ಪರಿಶೀಲಿಸುವುದರ ಮೂಲಕ ಈ ಲೇಖನವು ಈ ಪ್ರಶ್ನೆಯನ್ನು ಸಂಬೋಧಿಸುತ್ತದೆ.

ಸ್ವಾತಂತ್ರ್ಯಗಳಿಸಿದ 1947ರ ನಂತರದ ವರ್ಷಗಳಲ್ಲಿ ಭಾರತದಲ್ಲಿ ಶಾಲೆಗಳ ಸಂಖ್ಯೆಯಲ್ಲಿಬಹಳಷ್ಟು ಬೆಳವಣಿಗೆಯಾಗಿದೆ. 1950 ರಿಂದ ಈಚೆಗೆ ಪ್ರಾಥಮಿಕ ಶಾಲೆ (1 ರಿಂದ 5ನೇ ತರಗತಿ) ಗಳ ಸಂಖ್ಯೆ ಹೆಚ್ಚು ಕಡಿಮೆ ನಾಲ್ಕರಷ್ಟು ವೃದ್ಧಿಯಾಗಿದೆ, ಹಿರಿಯ ಪ್ರಾಥಮಿಕ ಶಾಲೆ (6 ರಿಂದ 8ನೇ ತರಗತಿ) ಗಳ ಸಂಖ್ಯೆ 19 ಪಟ್ಟು ಹೆಚ್ಚಾಗಿದೆ ಹಾಗೂ ಮಾಧ್ಯಮಿಕ ಶಾಲೆ (9 ರಿಂದ 12ನೇ ತರಗತಿ)ಗಳ ಸಂಖ್ಯೆ 21ರಷ್ಟು ಬೆಳೆದಿದೆ ಎಂದು ಕೋಷ್ಟಕ 1 ತೋರಿಸುತ್ತದೆ.  ಈಗ 130 ದಶಲಕ್ಷಕ್ಕೂ (ಮಿಲಿಯನ್‌ಗೆ) ಮೀರಿ ಪ್ರಾಥಮಿಕ ಶಾಲೆಗಳಲ್ಲಿ, 51 ದಶಲಕ್ಷ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ 37 ದಶಲಕ್ಷ ದಾಖಲಾಗಿದ್ದಾರೆ.

**ಕೋಷ್ಟಕ 1: ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು: ಶಾಲೆಗಳ ಸಂಖ್ಯೆ, ದಾಖಲಾತಿಗಳು ಮತ್ತು ಶಾಲೆ ಬಿಟ್ಟವರು**

| ಇಸವಿ | ಶಾಲೆಗಳು ಮತ್ತು ದಾಖಲಾತಿಗಳ ಸಂಖ್ಯೆ ಹಾಗೂ ಶಾಲೆ ಬಿಟ್ಟವರ ದರ | | | | | | | | |
|---|---|---|---|---|---|---|---|---|---|
| | ಪ್ರಾಥಮಿಕ 1–5 | | | ಹಿರಿಯ ಪ್ರಾಥಮಿಕ 6–8 | | | ಮಾಧ್ಯಮಿಕ/ ಹಿರಿಯ ಮಾಧ್ಯಮಿಕ | | |
| | ಶಾಲೆಗಳು ('000) | ದಾಖಲಾತಿ (ದಶಲಕ್ಷಗಳಲ್ಲಿ) | 1–5 ತರಗತಿಯ ವರೆಗೆ ಶಾಲೆ ಬಿಟ್ಟವರ ದರ (%) | ಶಾಲೆಗಳು ('000) | ದಾಖಲಾತಿ (ದಶಲಕ್ಷಗಳಲ್ಲಿ) | 1–8 ತರಗತಿಯ ವರೆಗೆ ಶಾಲೆ ಬಿಟ್ಟವರ ದರ (%) | ಶಾಲೆಗಳು ('000) | ದಾಖಲಾತಿ (ದಶಲಕ್ಷಗಳಲ್ಲಿ ) | 1–10 ತರಗತಿ ಯವರೆಗೆ ಶಾಲೆ ಬಿಟ್ಟವರ' ದರ (%) |
| 1950–51 | 210 | 19.2 | | 14 | 3.1 | | 7 | 1.5 | |
| 1960–61 | 330 | 35 | 64.9 | 50 | 6.7 | 78.3 | 17 | 3.4 | |
| 1970–71 | 408 | 57 | 67 | 91 | 13.3 | 77.9 | 37 | 7.6 | |
| 1980–81 | 495 | 73.8 | 58.7 | 119 | 20.7 | 72.7 | 52 | 11 | 82.5 |
| 1990–91 | 561 | 97.4 | 42.6 | 151 | 34 | 60.9 | 80 | 19.1 | 71.3 |

| | | | | | | | | | |
|---|---|---|---|---|---|---|---|---|---|
| 2000–01 | 639 | 113.8 | 40.7 | 206 | 42.8 | 53.7 | 126 | 27.6 | 68.6 |
| 2004–05 | 768 | 130 | 29.0 | 262 | 51.2 | 50.8 | 146 | 37.1 | 61.92 |
| **ಹೆಚ್ಚಳ (ಎಕ್ಸ್‌ರಷ್ಟು) 1950–2005** | 3.7 | 6.8 | | 18.7 | 16.5 | | 20.9 | 24.7 | |

ಮೂಲ: ಭಾರತ ಸರ್ಕಾರ, 2007.

ಪ್ರಾಥಮಿಕ ಶಾಲೆಗಳನ್ನು ಸೇರುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಬೃಹತ್ ಏರಿಕೆಯಾಗಿದ್ದರೂ ಶಾಲೆ ಬಿಟ್ಟವರ ಸಂಖ್ಯೆ ಅಗಾಧವಾಗಿದೆ. ಪ್ರಾಥಮಿಕ ಶಾಲೆಯ 1 ರಿಂದ 5ನೇ ತರಗತಿಯ ಮಧ್ಯಭಾಗದಲ್ಲಿ 1/3 ರಷ್ಟು (ಶೇ. 29 ರಷ್ಟು) ಮಕ್ಕಳು ಶಾಲೆಯನ್ನು ಬಿಡುತ್ತಾರೆಂದು ಕೋಷ್ಟಕ 1 ಸೂಚಿಸುತ್ತದೆ. ಅಷ್ಟು ಪ್ರಮಾಣದಲ್ಲಿ ಶಾಲೆ ಬಿಡುತ್ತಾರೆ ಎಂದರೆ, ಸಾಕಷ್ಟು ಕ್ಷೀಣಿಸಿದ ಸಂಖ್ಯೆಯ ವಿದ್ಯಾರ್ಥಿಗಳು ಹಿರಿಯ ಪ್ರಾಥಮಿಕ ಹಂತವನ್ನು ಪ್ರವೇಶಿಸುತ್ತಾರೆ ಎಂದರ್ಥ. ಶಾಲೆಗೆ ಸೇರಿದ ಅರ್ಧಕ್ಕಿಂತ ಹೆಚ್ಚು ಮಕ್ಕಳು (ಶೇ. 50.8 ರಷ್ಟು) ಹಿರಿಯ ಪ್ರಾಥಮಿಕ ಹಂತದ ಅಂತ್ಯದಲ್ಲಿ ಶಾಲಾ ವ್ಯವಸ್ಥೆಯಲ್ಲಿರುವುದಿಲ್ಲ. 10ನೇ ತರಗತಿ ಸೇರುವಷ್ಟರಲ್ಲಿ ಶಾಲಾ ವ್ಯವಸ್ಥೆಯಲ್ಲಿನ ನಷ್ಟವು ಶೇ. 62ಕ್ಕೆ ತಲುಪುತ್ತದೆ. ವಿಭಿನ್ನ ಕಾರಣಗಳಿಂದ, ಪ್ರಾಥಮಿಕ ಶಿಕ್ಷಣ ಪ್ರಾರಂಭಿಸಿದವರಲ್ಲಿ ಸುಮಾರು ಶೇ.38ರಷ್ಟು ಮಕ್ಕಳನ್ನು ಮಾತ್ರ 10ನೇ ತರಗತಿಯಲ್ಲಿ ಶಾಲೆಗಳು ಉಳಿಸಿಕೊಳ್ಳುತ್ತದೆ. ಪ್ರಾಥಮಿಕ ಶಿಕ್ಷಣ ಹಂತದಿಂದ ಅಷ್ಟೊಂದು ಮಕ್ಕಳು ಹೊರಗೆ ಉಳಿಯಲು ಕಾರಣವೇನು ಮತ್ತು ಅಷ್ಟೊಂದು ಸಂಖ್ಯೆಯ ಮಕ್ಕಳು ಹಿರಿಯ ಪ್ರಾಥಮಿಕ ಶಿಕ್ಷಣ ಹಂತವನ್ನು ಪ್ರವೇಶಿಸಲು ಏಕೆ ವಿಫಲರಾಗುತ್ತಾರೆ ಎಂಬುದಕ್ಕೆ ವ್ಯವಸ್ಥಿತ ಕೆಲವು ಕಾರಣಗಳನ್ನು ಈ ಲೇಖನವು ಪರಿಶೀಲಿಸುತ್ತದೆ.

ದೇಶದಲ್ಲಿ ಏಕೈಕ ಶಿಕ್ಷಣ ವ್ಯವಸ್ಥೆ ಇಲ್ಲದಿರುವುದರಿಂದ, ವ್ಯವಸ್ಥಿತ ಅಂಶಗಳ ಅಧ್ಯಯನವು ತೊಡಕಾಗಿದೆ. ಭಾರತದಲ್ಲಿ, ಚಾರಿತ್ರಿಕವಾಗಿ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಶಿಕ್ಷಣ ವ್ಯವಸ್ಥೆಯನ್ನು ಬೆಳೆಸಿಕೊಂಡು ಬಂದಿದೆ. ಅಂದರೆ, ರಾಜ್ಯಗಳ ಒಳಗಡೆ ಹಾಗೂ ಅವುಗಳ ನಡುವೆ ಶೈಕ್ಷಣಿಕ ಅವಕಾಶ ಒದಗಿಸುವಿಕೆಯಲ್ಲಿ ಬಹಳಷ್ಟು ವಿಭಿನ್ನತೆ ಕಂಡುಬರುತ್ತದೆ. ಕೇವಲ 1972ರಲ್ಲಿ ಭಾರತದ ಸಂವಿಧಾನದ 42ನೆಯ ತಿದ್ದುಪಡಿಯ ಫಲವಾಗಿ ಶಾಲಾ ಶಿಕ್ಷಣ ಕುರಿತಾದ ಶಾಸನದ ಜವಾಬ್ದಾರಿಯು ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೆಯಾಗಲು ಸಾಧ್ಯವಾಯಿತು. ಆದರೂ ಕಾರ್ಯರೂಪದಲ್ಲಿ, ಶಾಲಾ ಶಿಕ್ಷಣದ ಬಗ್ಗೆ ಕೇಂದ್ರದ ಯಾವುದೇ ಕಾನೂನು ಅಸ್ತಿತ್ವದಲ್ಲಿಲ್ಲ. ಆರ್ಥಿಕ ಅನುದಾನಗಳು, 'ಕೇಂದ್ರಿಯ ಪ್ರಾಯೋಜಿತ ಯೋಜನೆಗಳ' ಮೇಲೆ ವಿಧಿಸಲಾಗುವ ನಿಬಂಧನೆಗಳು ಮತ್ತು ಕೇಂದ್ರಿಯ ನೀತಿ ನಿರೂಪಣೆಗಳ ಮೂಲಕ ಶಿಕ್ಷಣದ ಮೇಲೆ ಪ್ರಭಾವ

ಬೀರುವ ಸೂಕ್ಷ್ಮ ಪ್ರಕ್ರಿಯೆಗಳು, ಕಾರ್ಯಾಗಾರಗಳು, ಸಭೆಗಳು, ಸಮಾವೇಶಗಳು ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ ಭಾರತದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇಂದ್ರದ ಪಾತ್ರವನ್ನು ಹೆಚ್ಚಿನ ಮಟ್ಟಿಗೆ ನಿರ್ವಹಿಸಲಾಗುವುದು.

ಶೈಕ್ಷಣಿಕ ವ್ಯವಸ್ಥೆಗಳು ಮತ್ತು ಸೌಲಭ್ಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿಭಿನ್ನತೆ ಭಾರತದಲ್ಲಿದೆ. ರಾಷ್ಟ್ರೀಯ ಮಟ್ಟದಲ್ಲಿ ಅಂಗೀಕರಿಸಿರುವ ಸಾರ್ವತ್ರಿಕ ಶಿಕ್ಷಣದ ವಿನ್ಯಾಸವು, ಸಾಮಾನ್ಯವಾಗಿ 10+2+3 ವಿನ್ಯಾಸವೆಂದು ಕರೆಯಲ್ಪಟ್ಟು, ಶಾಲಾ ವಿದ್ಯಾಭ್ಯಾಸದ ಮೊದಲ ಹತ್ತು ವರ್ಷಗಳಲ್ಲಿ ವಿಶಾಲ ತಳಹದಿಯ ಸಾಮಾನ್ಯ ಶಿಕ್ಷಣವನ್ನು ರೂಪಿಸಿದೆ. ಆದರೂ, ರಾಜ್ಯಮಟ್ಟದಲ್ಲಿ ಹಲವು ವಿಭಿನ್ನತೆಗಳಿವೆ. ಶಿಕ್ಷಣ ವ್ಯವಸ್ಥೆ ಮತ್ತು ಶಿಕ್ಷಣ ಒದಗಿಸಲು ನೇಮಿಸಿರುವ ಸಂಸ್ಥೆಗಳ ಸಂರಚನೆಗಳ ದೃಷ್ಟಿಯಿಂದಲೂ ವಿಭಿನ್ನತೆಗಳು ಕಂಡುಬರುತ್ತವೆ. ಆಡಳಿತಾತ್ಮಕ ಸಂರಚನೆಗಳು ಮತ್ತು ಸೌಕರ್ಯಗಳ ದೃಷ್ಟಿಯಿಂದಲೂ ನಗರ ಮತ್ತು ಗ್ರಾಮೀಣ ಪ್ರದೇಶಗಳು ವಿಶಿಷ್ಟತೆಗಳನ್ನು ಹೊಂದಿರಲು ಸಾಧ್ಯವಿದೆ.

ಸಂಖ್ಯೆ, ಅವರು ನೀಡುವ ಶಿಕ್ಷಣದ ಗುಣಮಟ್ಟ ಮತ್ತು ಸೌಲಭ್ಯಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸಗಳಿರುವ ವಿಶಾಲ ವ್ಯಾಪ್ತಿಯ ಶಿಕ್ಷಣ ಒದಗಿಸುವವರು ಕಂಡುಬರುತ್ತಾರೆ. ಹೆಚ್ಚಿನ ಸಂಖ್ಯೆಯ ಸರ್ಕಾರಿ ಶಾಲೆಗಳಲ್ಲಿ ಒದಗಿಸಲಾಗುವ ಸೌಲಭ್ಯಗಳು ಸಾಕಷ್ಟಿಲ್ಲದೆ ಅವುಗಳನ್ನು ಶಾಲೆಗಳೆಂದು ಕರೆಯಲು ಅರ್ಹತೆ ಹೊಂದಿಲ್ಲವಾದ್ದರಿಂದ ಅವುಗಳನ್ನು 'ಪರ್ಯಾಯ ಶಾಲೆ'ಗಳೆಂದು ಕರೆಯಲಾಗುತ್ತದೆ. ಸರ್ಕಾರದಿಂದ ನಡೆಸಲಾಗುತ್ತಿರುವ ಔಪಚಾರಿಕ ಶಾಲೆಗಳು ರಾಜ್ಯಗಳ ನಡುವೆ ಮತ್ತು ರಾಜ್ಯದ ಒಳಗೆ ಹೆಚ್ಚಿನ ವಿಭಿನ್ನತೆ ಹೊಂದಿದೆ.

ನಗರಗಳಲ್ಲಿನ ಅವಕಾಶವು ಹೆಚ್ಚಿನ ವಿಭಿನ್ನತೆಯನ್ನು ಹೇಗೆ ಹೊಂದಿದೆಯೆಂದು ಜುನೆಜಾ (Juneja) (2005) ವಿವರಿಸುತ್ತಾರೆ. ರಾಜ್ಯ ಸರ್ಕಾರದಿಂದ ಅನುದಾನ ಪಡೆಯುವ ಶಾಲೆಗಳಲ್ಲದೆ ಮುನಿಸಿಪಲ್ ಶಾಲೆಗಳು, ರಾಜ್ಯ ಸರ್ಕಾರದ ಶಾಲೆಗಳು, ಕೇಂದ್ರಿಯ ಶಾಲೆಗಳು (ಕೇಂದ್ರಿಯ ವಿದ್ಯಾಲಯಗಳು), ಸಾರ್ವಜನಿಕ ಕ್ಷೇತ್ರದ ಕಾರ್ಮಿಕರಿಗಾಗಿ ನಡೆಸಲ್ಪಡುವ ಶಾಲೆಗಳಿವೆ (ಉದಾ: ಭೂಪಡೆ, ನೌಕಾಪಡೆ, ವಾಯುಪಡೆ, ಪೊಲೀಸ್, ರೈಲ್ವೆ ಇಲಾಖೆ, ಇತ್ಯಾದಿ). ಟಿಬೆಟನ್ ಶಾಲೆಗಳ ಸಂಸ್ಥೆ (Tibetan Schools Organisation) ಮತ್ತು ಸಾರ್ವಜನಿಕ ಕ್ಷೇತ್ರದ ಅನೇಕ ಕಂಪನಿಗಳು (ಅಣುಶಕ್ತಿ ಆಯೋಗ, ಭಾರತೀಯ ವಿಮಾನಯಾನ, ಭಾರತೀಯ ತೈಲ ನಿಗಮ ಮುಂತಾದವುಗಳು) ತಮ್ಮ ಸಿಬ್ಬಂದಿಯ ಮಕ್ಕಳಿಗಾಗಿ ನಡೆಸುವ ಶಾಲೆಗಳಿವೆ. ಶಾಲಾ ಶಿಕ್ಷಣದ ಭಾರತೀಯ ಸರ್ಟಿಫಿಕೆಟ್ (ICSE- Indian Certificate of Secondary Education), ಮಾಧ್ಯಮಿಕ ಶಿಕ್ಷಣದ ಕೇಂದ್ರಿಯ ಮಂಡಳಿ (CBSE- Central Board of Secondary Education) ಹಾಗೂ ದೆಹಲಿ ಮತ್ತು ಮುಂಬೈಗಳಲ್ಲಿರುವ

ಅಂತರರಾಷ್ಟ್ರೀಯ ರಾಯಭಾರಿ ಕಛೇರಿಗಳು ನಡೆಸುವ ಶಾಲೆಗಳೂ ಇವೆ. ಇದಲ್ಲದೆ ಮಾಧ್ಯಮಿಕ ಶಾಲೆಗಳಿಗೆ ಪೂರೈಕೆ ಮಾಡುವ ಮಾನ್ಯತೆ ಪಡೆಯದ ಅನೇಕ ಶಾಲೆಗಳೂ ಇವೆ. ರಾಷ್ಟ್ರೀಯ ಅಥವಾ ರಾಜ್ಯದ ಮುಕ್ತ ಶಾಲೆಗಳ ಮೂಲಕ ಸಮಾಂತರ ಕೋರ್ಸ್‌ಗಳಲ್ಲಿ (NOS ಅಥವಾ SOS) ಅನೇಕ ಮಕ್ಕಳು ದಾಖಲಾತಿ ಪಡೆದಿರಲೂ ಬಹುದು. ಇವುಗಳನ್ನೂ ಈ ಲೇಖನದಲ್ಲಿ ವಿವರಿಸಲಾಗಿದೆ.

ವಸಾಹತು ಕಾಲದಿಂದಲೂ ಭಾರತದಲ್ಲಿ ಖಾಸಗಿ ಕ್ಷೇತ್ರವು ಶಿಕ್ಷಣ ಒದಗಿಸುತ್ತಾ ಬಂದಿದೆ. ಸರ್ಕಾರಿ ಕ್ಷೇತ್ರದ ಶಾಲೆಗಳಿಗಿಂತ ಖಾಸಗಿ ಕ್ಷೇತ್ರದ ಶಾಲೆಗಳು ಹೆಚ್ಚು ಭಿನ್ನತೆ ಹೊಂದಿವೆ. ಖಾಸಗಿ ಕ್ಷೇತ್ರದ ಶಾಲೆಗಳು ಸರ್ಕಾರದಿಂದ ಅನುದಾನಕ್ಕೆ ಒಳಪಟ್ಟಿರಬಹುದು ಅಥವಾ ಹೆಚ್ಚುತ್ತಿರುವ ಸಂದರ್ಭಗಳಲ್ಲಿ ಅನುದಾನ ಪಡೆಯದೇ ಇರಬಹುದು. ಅವುಗಳು ಸರ್ಕಾರದಿಂದ ಮಾನ್ಯತೆ ಪಡೆದು ಕಾರ್ಯನಿರ್ವಹಿಸುತ್ತಿರಬಹುದು ಅಥವಾ ಮಾನ್ಯತೆ ಪಡೆಯದೆ ಉಳಿದಿರಬಹುದು.

ಆ ರೀತಿಯ ವಿಭಿನ್ನತೆಯ ಹಿನ್ನಲೆಯಲ್ಲಿ, ಯಾವುದೇ ಒಂದು ಲೇಖನವು ಭಾರತದ ಶಾಲೆಗಳ ಪೂರೈಕೆಯಲ್ಲಿನ ಎಲ್ಲಾ ವಿಭಿನ್ನತೆಗಳನ್ನು ಸಾಕಷ್ಟು ಒಳಗೊಂಡಿರಲು ಸಾಧ್ಯವಿಲ್ಲ. ಅಥವಾ ಯಾವುದೇ ವರ್ಗೀಕರಣ ಯೋಜನೆಯಿಂದ ಅದರ ವೈವಿಧ್ಯತೆ ಮತ್ತು ವಿಶಿಷ್ಟತೆಗಳ ವರ್ಣನೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಈ ಲೇಖನವು ಶಾಲೆ ಪೂರೈಕೆಯಲ್ಲಿನ ವೈವಿಧ್ಯತೆಯನ್ನು ಪ್ರಾಥಮಿಕ ಶಿಕ್ಷಣದಲ್ಲಿನ ಪ್ರವೇಶಾವಕಾಶಕ್ಕೆ ಮತ್ತು ಭಾಗವಹಿಸುವಿಕೆ ವಿಚಾರಗಳ ಜೊತೆ ಸಂಬಂಧ ಕಲ್ಪಿಸುತ್ತದೆ. ಈ ಕೆಳಕಂಡ ಪ್ರಶ್ನೆಯನ್ನು ಕೇಳಲು ಈ ಲೇಖನವು ಸಂಶೋಧನಾ ಸಾಹಿತ್ಯ ಮತ್ತು ಸರ್ಕಾರಿ ವರದಿಗಳನ್ನು ಸಾಕ್ಷಿಯಾಗಿ ಬಳಸಿಕೊಂಡಿದೆ: ಶಿಕ್ಷಣದ ಪೂರೈಕೆಯಲ್ಲಿ ಅಂತಹ ವಿಭಿನ್ನತೆಯಿರುವ ಕಡೆ, ಪ್ರತಿಯೊಂದು ಮಗುವಿಗೂ ಪ್ರಾಥಮಿಕ ಶಿಕ್ಷಣಕ್ಕೆ ಸಮಾನ ಪ್ರವೇಶಾವಕಾಶ ಒದಗಿಸಲಾಗಿದೆಯೇ? ಇದು ಮುಂದಿನ ಸಂಶೋಧನೆಗಾಗಿ ಕ್ಷೇತ್ರಗಳನ್ನೂ ಗುರುತಿಸುತ್ತದೆ.

ಕಳೆದ ಕೆಲವು ವರ್ಷಗಳಲ್ಲಿ ಗಮನಿಸಬಹುದಾದ, ಭಾರತದಲ್ಲಿ ಲಭ್ಯವಿರುವ ಶಾಲಾ ವಿದ್ಯಾಭ್ಯಾಸದ ಆಯ್ಕೆಗಳಲ್ಲಿನ ಹಲವು ವ್ಯಾಪಕ ಮತ್ತು ಉದಯೋನ್ಮುಖ ಬೆಳವಣಿಗೆಗಳನ್ನು ಈ ಲೇಖನವು ತಿಳಿಸುತ್ತದೆ. ಅಂತಿಮವಾಗಿ, ಶಾಲಾ ವಿದ್ಯಾಭ್ಯಾಸದ ಆಯ್ಕೆಗಳ ಈ ವೈವಿಧ್ಯತೆಯು ಹೇಗೆ ಪ್ರಾಥಮಿಕ ವಿದ್ಯಾಭ್ಯಾಸ ಪ್ರವೇಶಾವಕಾಶದ ಮೇಲೆ ಪ್ರಭಾವ ಬೀರುತ್ತದೆ ಎಂದು ಪರಿಶೀಲಿಸುವ ಸಂಶೋಧನಾ ಪುರಾವೆಗಳನ್ನು ಈ ಲೇಖನವು ನೋಡುತ್ತದೆ. ಶಾಲೆಗಳನ್ನು ಬಿಟ್ಟವರ ಪ್ರಮಾಣಗಳು,

ಕಲಿಕಾ ಸಾಧನೆ ಮತ್ತು ಪ್ರಾಥಮಿಕದಿಂದ ಹಿರಿಯ ಪ್ರಾಥಮಿಕ ಹಂತಕ್ಕೆ ಹೋಗುವ ಅವಕಾಶಗಳನ್ನು ಅದು ಅವಲೋಕಿಸುತ್ತದೆ.

ಶೈಕ್ಷಣಿಕ ಪ್ರವೇಶಾವಕಾಶ, ಪರಿವರ್ತನೆಗಳು ಮತ್ತು ಸಮತೆಗಳ ಮೇಲಿನ ಸಂಶೋಧನೆಗಾಗಿರುವ ಒಕ್ಕೂಟ (CREATE – Consortium for Research on Educational Access, Transitions and Equity)*ವು ಕೈಗೊಂಡಿರುವ ಸಂಶೋಧನೆಯ ಕಾರ್ಯಕ್ರಮವೊಂದಕ್ಕೆ ಈ ಲೇಖನ ಬರೆಯಲಾಗಿದೆ. ಭಾರತವೂ ಸೇರಿದಂತೆ ಹಲವಾರು ದೇಶಗಳ ಸಂದರ್ಭಯೋಚಿತಗಳಲ್ಲಿ ಶಿಕ್ಷಣಕ್ಕಿರುವ ಅರ್ಥಪೂರ್ಣ ಪ್ರವೇಶಾವಕಾಶವನ್ನು ಈ ಲೇಖನವು ಗಮನಿಸುತ್ತದೆ.

## 2. ಶಾಲಾ ವಿದ್ಯಾಭ್ಯಾಸ ಆಯ್ಕೆಗಳ ವಿಭಿನ್ನತೆ

ಈ ವಿಭಾಗದಲ್ಲಿ ಶಿಕ್ಷಣ ಒದಗಿಸುವವರ ವೈವಿಧ್ಯತೆಯನ್ನು ತಿಳಿಸಲಾಗಿದೆ ಮತ್ತು ಕೆಲವು ಮುಖ್ಯ ಚರ್ಚೆಗಳನ್ನು ಒತ್ತಿ ಹೇಳಲಾಗಿದೆ.

### 2.1 ಸರ್ಕಾರಿ ಶಾಲೆಗಳು

ಸರ್ಕಾರದಿಂದ ನಡೆಸಲಾಗುವ ಶಾಲೆಗಳನ್ನು ಸಾಮಾನ್ಯವಾಗಿ ಸರ್ಕಾರಿ/ಪುರಸಭಾ ಶಾಲೆಗಳೆಂದು ಭಾರತದಲ್ಲಿ ಕರೆಯಲಾಗುತ್ತದೆ ಮತ್ತು ಇವುಗಳು ಔಪಚಾರಿಕ ಶಾಲಾ ವಿದ್ಯಾಭ್ಯಾಸಕ್ಕೆ ಹೆಚ್ಚು ಸರಿಸಮಾನವಾಗಿವೆ. ಈ ವಿಭಾಗದಲ್ಲಿ ಚರ್ಚಿಸಲಾಗುವ ಸರ್ಕಾರಿ ಶಾಲೆಗಳು, ವಿವಿಧ ಹಂತದ ಸರ್ಕಾರಗಳಾದ ಕೇಂದ್ರ, ರಾಜ್ಯ, ಸ್ಥಳೀಯ ಸಂಸ್ಥೆ/ಜಿಲ್ಲೆ (ಪುರಸಭೆ) ಹಂತದಲ್ಲಿ ನಡೆಸಲಾಗುವ ಶಾಲೆಗಳನ್ನು ಒಳಗೊಂಡಿದೆ. ಶಾಲೆಯನ್ನು ನಿರ್ವಹಿಸಲ್ಪಡುವ ಸರ್ಕಾರದ ಹಂತಕ್ಕನುಗುಣವಾಗಿ ಸರ್ಕಾರ ನಡೆಸುವ ಶಾಲೆಗಳನ್ನು ವರ್ಗೀಕರಿಸಬಹುದಾಗಿದೆ. ಪ್ರಾಥಮಿಕ ಶಾಲಾ ಹಂತದ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಇತ್ತೀಚೆಗೆ ಕೆಲವು ರಾಜ್ಯಗಳಲ್ಲಿ (ಭಾರತ ಸರ್ಕಾರ, 1993b), ಜಿಲ್ಲಾ ಹಂತಕ್ಕೆ ವಹಿಸಲಾಗಿದೆ, ಆದರೆ ಸುಮಾರು 200 ವರ್ಷಗಳಿಂದಲೂ ಕೆಲವು ನಗರಗಳು ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ಹೊಂದಿವೆ. ಈ ನಗರಗಳಲ್ಲಿನ ಆಚರಣೆಗಳು ಅವುಗಳ ರಾಜ್ಯಗಳಿಗಿಂತ ಭಿನ್ನವಾಗಿದೆ. ರಾಜ್ಯಹಂತದ ಕೆಳಗಿನ ಮೂರನೇ ಸ್ತರದ (ಜಿಲ್ಲಾ ಹಂತ) ಸರ್ಕಾರವು ಶಾಲೆಗಳಿಗೆ ನೀಡಿರುವ ಜವಾಬ್ದಾರಿಯ ಮಟ್ಟಕ್ಕೆ ಸಂಬಂಧಿಸಿದಂತೆ ರಾಜ್ಯಗಳ ನಡುವೆ ಅಧಿಕ ಭಿನ್ನತೆಯಿದೆ.

ಪ್ರತಿಯೊಂದು ಜಿಲ್ಲೆಯಲ್ಲೂ ಒಂದು 'ಮಾದರಿ ಶಾಲೆ' ಇರಬಹುದಾಗಿದೆ, ಆ ರೀತಿಯ ಸರ್ಕಾರಿ ಶಾಲೆಯನ್ನು ಸರ್ಕಾರಿ ಮಾದರಿ ಶಾಲೆಯೆಂದು ಕರೆಯಲಾಗುವುದು. ವಸಾಹತು ಕಾಲದಲ್ಲಿ ಮಾದರಿ ಶಾಲೆಗಳನ್ನು ಸ್ಥಾಪಿತಲಾಗಿದ್ದೂ, ಇಂದಿಗೂ ಅವು ಮುಂದುವರಿಯುತ್ತಿವೆ. ಬೇರೆ ಸರ್ಕಾರಿ ಶಾಲೆಗಳಿಗಿಂತ ಹೆಚ್ಚಿನ ಶಿಕ್ಷಕರನ್ನೂ ಪಡೆದಿರುವ ಜೊತೆಗೆ ಅವು ಸಾಮಾನ್ಯವಾಗಿ ಹೆಚ್ಚಿನ ಸೌಲಭ್ಯ ಹೊಂದಿರುವ ರೀತಿಯ ಶಾಲೆಗಳಾಗಿದ್ದು ಹೆಚ್ಚು ಬೇಡಿಕೆಯಿಂದ ಅವುಗಳು ಕೂಡಿರುವುದ್ದಾಗಿದೆ.

ಶಿಕ್ಷಣ ಖಾತರಿ ಶಾಲೆ (EGS - Education Guarantee Schools)ಗಳನ್ನು ಔಪಚಾರಿಕ ಶಾಲೆಗಳಂತೆ ಇತ್ತೀಚೆಗೆ ಸ್ಥಾಪಿಸಲಾಗಿದೆ. ಸರ್ವ ಶಿಕ್ಷಣ ಅಭಿಯಾನ (SSA - Sarva Shiksha Abhiyan) ದ ಆಶ್ರಯದಲ್ಲಿ EGSಶಾಲೆಗಳನ್ನು ಭಾರತದಾದ್ಯಂತ ಸ್ಥಾಪಿಸಲಾಗಿದೆ. ಪೂರ್ಣ ಪ್ರಾಥಮಿಕ ಶಾಲೆಯನ್ನು ಹೊಂದಲು, ಅರ್ಹತೆ ಹೊಂದಿರದ ಸ್ಥಳಗಳಲ್ಲಿ ಶಾಲಾ ವಿದ್ಯಾಭ್ಯಾಸ ಸೌಲಭ್ಯಗಳನ್ನು ಒದಗಿಸಲು ಸಾಮಾನ್ಯವಾಗಿ ತರಬೇತಿ ಪಡೆಯದ ಒಬ್ಬ ಸ್ಥಳೀಯ 'ಶಿಕ್ಷಕ/ಶಿಕ್ಷಕಿ' ಯನ್ನು ಒಳಗೊಂಡ ಈ ಶಾಲೆಗಳನ್ನು ಸ್ಥಾಪಿಸಲಾಯಿತು. ವಾಸಸ್ಥಳದಿಂದ ಸ್ವಲ್ಪ ದೂರದಲ್ಲಿರುವ ದೊಡ್ಡ ಪ್ರಾಥಮಿಕ ಶಾಲೆಗಳಿಗೆ ಪೂರೈಕೆ ಶಾಲೆಗಳಾಗಿಯೂ ಇವುಗಳನ್ನು ಆಲೋಚಿಸಲಾಯಿತು. ಕನಿಷ್ಟ ಪಕ್ಷ 10 ಮಕ್ಕಳಿಗೆ ಒಂದು ಶಾಲೆ ಬೇಕೆಂದು ಬೇಡಿಕೆ ಮುಂದಿಟ್ಟ ಪೋಷಕರುಗಳ ಒಂದು ಗುಂಪಿಗೆ ಶಿಕ್ಷಣದ ಖಾತರಿಯನ್ನು ಒದಗಿಸಲಾಯಿತು. 3 ತಿಂಗಳ ಒಳಗಡೆ ಸ್ಥಳೀಯ ಓರ್ವ ಯುವಕ/ಯುವತಿಯನ್ನೂ ಗುರುತಿಸಿ ಮಕ್ಕಳಿಗೆ ಬೋಧನೆ ಪ್ರಾರಂಭಿಸಲು ವ್ಯವಸ್ಥೆ ಮಾಡಲಾಯಿತು. EGS ಯೋಜನೆ (ಮತ್ತು ಪರ್ಯಾಯ ಮಾದರಿಗಳು) ಯಲ್ಲಿ ಪುಟ್ಟ ಶಾಲೆಗಳು ಹೆಚ್ಚಿನ ಮಕ್ಕಳನ್ನೂ ಶಾಲೆಗಳಿಗೆ ಕರೆತರುವಲ್ಲಿ ಯಶಸ್ವಿಯಾಗಿರಬಹುದಾಗಿ ತೋರುತ್ತದೆಂದು ಗೋವಿಂದಾ ಮತ್ತು ಬಿಸ್ವಾಲ್ (Govind and Biswal) ಇವರುಗಳು (2006) ಅಭಿಪ್ರಾಯಪಟ್ಟಿದ್ದಾರೆ. ಆದಾಗ್ಯೂ, ಈ ಪುಟ್ಟ ಶಾಲೆಗಳ ಭವಿಷ್ಯದ ನೀತಿ ಪರಿಣಾಮಗಳು ಮತ್ತು ಬೇರೆ ರೂಪದ ಶಿಕ್ಷಣಕ್ಕೆ ಈ ಮಕ್ಕಳು ಹೇಗೆ ತೆರಳುತ್ತಾರೆ ಎಂಬುದರ ಬಗ್ಗೆ ಇವರು ಪ್ರಶ್ನಿಸಿದ್ದಾರೆ.

ಮಾದರಿ ಮತ್ತು EGS ಶಾಲೆಗಳೆರಡೂ, ರೂಢಿಯ ಮಟ್ಟದಿಂದ, ವೈವಿಧ್ಯತೆಯನ್ನು ಪ್ರತಿನಿಧಿಸಿದರೆ, ಸಾಮಾನ್ಯವಾಗಿ ಆಯ್ದ ಮತ್ತು ವಿಶಿಷ್ಟ ಗುಂಪಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಮಾದರಿ ಶಾಲೆಗಳು ವಿಕಾಸಗೊಂಡಿವೆ. ಜನ ಸಮೂಹವನ್ನು ಒಳಗೊಳ್ಳುವ ಮತ್ತು ಹೆಚ್ಚಿನ ಸಂದರ್ಭದಲ್ಲಿ ಕಡಿಮೆ ಗುಣಮಟ್ಟದ ಅವಕಾಶ ಹೊಂದಿರುವ ಅಗತ್ಯತೆಗೆ ಉತ್ತರವಾಗಿ EGS ಶಾಲೆಗಳು ವಿಕಾಸಗೊಂಡಿವೆ.

ಕೇಂದ್ರ ಸರ್ಕಾರವು ಮೂರು ರೀತಿಯ ಶಾಲೆಗಳನ್ನು ನಡೆಸುತ್ತದೆ – ಕೇಂದ್ರಿಯ ವಿದ್ಯಾಲಯಗಳು (ಕೇಂದ್ರಿಯ ಶಾಲೆಗಳೆಂದು ಅಕ್ಷರಶಃ ಭಾಷಾಂತರಿಸಲಾಗಿದೆ), ಜವಹರ್ ನವೋದಯ ವಿದ್ಯಾಲಯಗಳು ಮತ್ತು ಕೇಂದ್ರಿಯ ಟಿಬೆಟೆನ್ ನಿರಾಶ್ರಿತರಿಗಾಗಿರುವ ಟಿಬೆಟೆನ್ ಶಾಲೆಗಳು (ವಿವರಗಳನ್ನು ಇಲ್ಲಿ ಚರ್ಚಿಸಿಲ್ಲ).

ವರ್ಗಾಯಿಸಲಾಗುವ ಕೇಂದ್ರ ಸರ್ಕಾರದ ಸಿಬ್ಬಂದಿಗಳ ಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳೆಂದು 1965ರಲ್ಲಿ ಕೇಂದ್ರಿಯ ವಿದ್ಯಾಲಯಗಳನ್ನು (ಕೇಂದ್ರಿಯ ಶಾಲೆಗಳು)ಸ್ಥಾಪಿಸಲಾಯಿತು. ಹೆಚ್ಚಿನ ಶೈಕ್ಷಣಿಕ ಅವಕಾಶವು ರಾಜ್ಯದ ಹಂತದಲ್ಲಿ ನಿರ್ವಹಿಸಲಾಗುವುದರಿಂದ, ಪಠ್ಯಕ್ರಮ, ಬೋಧನಾ ಮಾಧ್ಯಮ ಮತ್ತು ಪಠ್ಯಪುಸ್ತಕಗಳು ರಾಜ್ಯಕ್ಕನುಗುಣವಾಗಿ ಬದಲಾಗುತ್ತದೆ. ನಿಯಮಿತವಾಗಿ ಸ್ಥಳ ಬದಲಾಯಿಸುವ ನೌಕರರ ಮಕ್ಕಳಿಗೆ ಇದರಿಂದ ಅಡಚಣೆ ಉಂಟಾಗುತ್ತದೆ. ಕೇಂದ್ರಿಯ ವಿದ್ಯಾಲಯಗಳು ನಾಲ್ಕು ಗುರಿಗಳನ್ನು ಹೊಂದಿವೆ: (a) ಶಿಕ್ಷಣದ ಸಾಮಾನ್ಯ ಕಾರ್ಯಕ್ರಮ ಒದಗಿಸುವುದರ ಮೂಲಕ ರಕ್ಷಣೆ ಮತ್ತು ಪಾರಾ ಮಿಲಿಟರಿ (para military) ಸಿಬ್ಬಂದಿಗಳನ್ನೊಳಗೊಂಡ, ವರ್ಗಾಯಿಸಲಾಗುವ ಸಿಬ್ಬಂದಿಗಳ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವುದು; (b) ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು ಉತ್ಕೃಷ್ಟತೆಯನ್ನು ಸಾಧಿಸುವುದು;(c) ಮಾಧ್ಯಮಿಕ ಶಿಕ್ಷಣದ ಕೇಂದ್ರಿಯ ಸಮಿತಿ (CBSE) ಮತ್ತು ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಗಾಗಿರುವ ರಾಷ್ಟ್ರೀಯ ಮಂಡಳಿ (NCERT – National Council of Educational Research and Training) ಗಳಂತಹ ಸಂಸ್ಥೆಗಳ ಸಹಯೋಗದ ಮೂಲಕ ಶಿಕ್ಷಣದಲ್ಲಿ ಪ್ರಯೋಗ ಮತ್ತು ನಾವಿನ್ಯತೆಗಳನ್ನು ಪ್ರಾರಂಭಿಸುವುದು ಮತ್ತು ಪೋಷಿಸುವುದು; (d) ಮಕ್ಕಳಲ್ಲಿ ರಾಷ್ಟ್ರೀಯ ಭಾವೈಕ್ಯತೆ ಭಾವನೆಯನ್ನು ಬೆಳೆಸುವುದು ಮತ್ತು ಭಾರತೀಯತೆಯ ಅರಿವು ಉಂಟು ಮಾಡುವುದು. ಕೇಂದ್ರ ಸರ್ಕಾರದ ಆಡಳಿತಕ್ಕೊಳಪಟ್ಟು ನಿರ್ವಹಿಸಲ್ಪಡುತ್ತಿರುವ ಈ ಶಾಲೆಗಳು ರಾಜ್ಯ ಸರ್ಕಾರದ ಶಾಲೆಗಳಿಗಿಂತಲೂ ಉತ್ತಮವಾದ ಆರ್ಥಿಕ ಸಹಾಯಕ್ಕೊಳಪಟ್ಟು, ಉತ್ತಮ ಸಲಕರಣೆಗಳನ್ನು ಹೊಂದಿದ್ದು, ಜಿಲ್ಲಾ ಮಾದರಿ ಶಾಲೆಗಳಿಗಿಂತಲೂ ಹೆಚ್ಚು ಬೇಡಿಕೆಯನ್ನು ಹೊಂದಿವೆ. ಕೇಂದ್ರಿಯ ವಿದ್ಯಾಲಯಗಳಲ್ಲಿ ಪ್ರತಿ ಕಲಿಕಾರ್ಥಿಯಿಂದ ಸರ್ಕಾರಕ್ಕೆ ತಗಲುವ ರಾಷ್ಟ್ರೀಯ ಸರಾಸರಿ ವೆಚ್ಚವು ಸುಮಾರು **ರೂ**.11,000 ಗಳಾಗಿದ್ದರೆ, ಸಾಮಾನ್ಯ ಸರ್ಕಾರಿ ಶಾಲೆಗಳಲ್ಲಿ ತಗಲುವ ವೆಚ್ಚವು ಸುಮಾರು **ರೂ**.1,800 ಗಳಾಗಿದ್ದು, ಇದು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ (Raina(ರೈನಾ),2006). ಈ ರೀತಿಯ ಶಾಲೆಗಳಲ್ಲಿ ಕಡೇ ಪಕ್ಷ ಮಾಧ್ಯಮಿಕ ಹಂತದಲ್ಲಿ ಬೋಧನಾ ಮಾಧ್ಯಮವು ಸಾಮಾನ್ಯವಾಗಿ ಇಂಗ್ಲಿಷ್ ಆಗಿರುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿ (ಭಾರತ ಸರ್ಕಾರ, 1986) ಜಾರಿಯಾದ ನಂತರದಲ್ಲಿ ಗ್ರಾಮೀಣ ಮಕ್ಕಳ ಅವಶ್ಯಕತೆ ಪೂರೈಸಲು ದೇಶದಾದ್ಯಂತ ಜವಹರ್ ನವೋದಯ ವಿದ್ಯಾಲಯಗಳನ್ನು ಸ್ಥಾಪಿಸಲಾಯಿತು. ಪ್ರತಿಯೊಂದು ಜಿಲ್ಲೆಯಲ್ಲೂ ಕನಿಷ್ಠ ಒಂದು ಶಾಲೆಯಿದೆ. ನವೋದಯ ವಿದ್ಯಾಲಯ ಯೋಜನೆಗಳ ಉದ್ದೇಶಗಳೆಂದರೆ (a) ಪ್ರಮುಖವಾಗಿ ಗ್ರಾಮಾಂತರ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಅವರ ಕುಟುಂಬದ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳನ್ನು ಗಣನೆಗೆ ತೆಗೆದುಕೊಳ್ಳದೆ,ಪ್ರಬಲವಾದ ಸಾಂಸ್ಕೃತಿಕ ಅಂಶವನ್ನು ಹೊಂದಿರುವ, ಮೌಲ್ಯಗಳನ್ನು ರೂಢಿಸುವ, ಪರಿಸರದ ಬಗ್ಗೆ ಜಾಗೃತಿ ಮೂಡಿಸುವ, ಸಾಹಸಮಯ ಚಟುವಟಿಕೆಗಳು ಮತ್ತು ದೈಹಿಕ ಶಿಕ್ಷಣವನ್ನು ಒಳಗೊಂಡಿರುವ ಉತ್ತಮ ಗುಣಮಟ್ಟದ ಆಧುನಿಕ ಶಿಕ್ಷಣವನ್ನು ಒದಗಿಸುವುದು; (b) ನವೋದಯ ವಿದ್ಯಾಲಯದ ಎಲ್ಲಾ ವಿದ್ಯಾರ್ಥಿಗಳು ತ್ರಿಭಾಷಾ ಸೂತ್ರದಲ್ಲಿ ನಮೂದಿಸಿರುವ ಮೂರು ಭಾಷೆಗಳಲ್ಲಿ ಸಾಕಷ್ಟು ಮಟ್ಟದ ಸಾಮರ್ಥ್ಯ ಗಳಿಸುವಂತೆ ಖಾತ್ರಿ ಪಡಿಸುವುದು; (c) ಅನುಭವ ಮತ್ತು ಸೌಲಭ್ಯಗಳನ್ನು ಹಂಚಿಕೊಳ್ಳುವುದರ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲೂ ಶಾಲಾ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಕೇಂದ್ರ ಬಿಂದುಗಳಂತೆ ಕಾರ್ಯನಿರ್ವಹಿಸುವುದು. ಸಾಧಾರಣ ಗ್ರಾಮೀಣ ಶಾಲೆಗಳ ಉತ್ಕೃಷ್ಟ ಮೇಲ್ಪದರವನ್ನು ಇವು ಸೃಷ್ಟಿಸಿವೆ ಎಂಬ ಆರೋಪ ಗ್ರಾಮಾಂತರ ತಳಹದಿ ಪಡೆದಿರುವ ಈ ಶಾಲೆಗಳ ಮೇಲಿದೆ; ಶ್ರೀಮಂತರಿಗಾಗಿರುವ ವಸತಿ ಶಾಲೆಗಳ ದೃಷ್ಟಿಕೋನವನ್ನು ಈ ಶಾಲೆಗಳು ಹೊಂದಿವೆ ಎಂಬ ಆರೋಪವೂ ಇದೆ. ಈ ಶಾಲೆಗಳಿಗೆ ಪ್ರವೇಶವು ಹೆಚ್ಚು ಬೇಡಿಕೆಯಿಂದ ಕೂಡಿದೆ ಮತ್ತು ಈ ಶಾಲೆಗಳಿಗೆ ಮಕ್ಕಳನ್ನು ಆಯ್ಕೆ ಮಾಡಲು ಪರೀಕ್ಷೆಗಳನ್ನು ನಡೆಸಲಾಗುತ್ತದೆ.

ಆಶ್ರಮ ಶಾಲೆಗಳು ಪರಿಶಿಷ್ಟ ಪಂಗಡ ಸಮುದಾಯದ ಮಕ್ಕಳಿಗೆ ಶಿಕ್ಷಣ ಒದಗಿಸುತ್ತದೆ. ಸಮಾಜದ ಮುಖ್ಯ ವಾಹಿನಿಯಲ್ಲಿ ಸೇರ್ಪಡೆಯಾಗುವಂತೆ ಅನುಕೂಲ ಮಾಡಿಕೊಡಲು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿಯೇ ರಾಜ್ಯ ಸರ್ಕಾರಗಳು ಉಚಿತ ಶಿಕ್ಷಣ, ವಸತಿ ಮತ್ತು ಶಿಷ್ಯವೇತನವನ್ನು ಒದಗಿಸುತ್ತದೆ. ಅರಣ್ಯ ಪ್ರದೇಶಗಳಲ್ಲಿ, ಬುಡಕಟ್ಟು ಸಮುದಾಯಗಳು ನೆಲೆಸುವ ಸ್ಥಳಗಳ ಹತ್ತಿರ ಹಾಗೂ ಟೆಹಸಿಲ್ ಪಟ್ಟಣಗಳ ಹತ್ತಿರ (ಸ್ಥಳೀಯ ಆಡಳಿತಾತ್ಮಕ ಪ್ರಧಾನ ಕಛೇರಿಗಳು) ಆಶ್ರಮ ಶಾಲೆಗಳಿವೆ, ಆದರೆ ನಗರಗಳ ಅಥವಾ ವಿಶಾಲವಾದ ಪಟ್ಟಣ ಪ್ರದೇಶಗಳ ಹತ್ತಿರ ಎಂದಿಗೂ ಇರುವುದಿಲ್ಲ. 300 ರಿಂದ 400 ಚದುರ ಅಡಿ ವಿಸ್ತೀರ್ಣದ ಒಂದು ಕೋಣೆಯಲ್ಲಿ ಒಂದು ಸಣ್ಣ ತರಗತಿ, ಒಂದು ಕಛೇರಿ ಮತ್ತು ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮಾಡಲು ಒಂದು ಅಡುಗೆ ಮನೆ ಇವುಗಳನ್ನು ಆಶ್ರಮ ಶಾಲಾ ಕಟ್ಟಡಗಳು ಹೊಂದಿರುತ್ತದೆ. (Upadhyay et al (ಉಪಾಧ್ಯಾಯ ಮತ್ತಿತರರು), 2005).

## 2.2 ಪೂರೈಕೆಯ ಪರ್ಯಾಯ ಮಾದರಿಗಳು

ಅಧಿಕ ಸಂಖ್ಯೆಯ ಜನಗಳಿಗೆ ಶಾಲಾ ವಿದ್ಯಾಭ್ಯಾಸ ಒದಗಿಸಲು ಸರ್ಕಾರವು 1979–80ರವರೆಗೆ (Ramachandran (ರಾಮಚಂದ್ರನ್), 2004) ಒಂದು ಏಕರೂಪದ ಮಾದರಿಯನ್ನು ಅನುಸರಿಸಿತು. ಶಿಕ್ಷಣ ಆಯೋಗ (ಭಾರತ ಸರ್ಕಾರ, 1964–66) ದ ಶಿಫಾರಸ್ಸುಗಳನ್ನು ಆಧರಿಸಿ ಈ ವರ್ಷಗಳಲ್ಲಿ ಔಪಚಾರಿಕವಲ್ಲದ ಯೋಜನೆಗೆ (NFE- Non Formal Education) ಒಂದು ಸಣ್ಣ ಪ್ರಮಾಣದ ಪ್ರಾಯೋಗಿಕ ಯೋಜನೆಯನ್ನು ಮೊದಲು ಮಾಡಿತು. ಸರ್ಕಾರದ ಬೆಂಬಲ ಪಡೆದ, ಅಗತ್ಯವಾಗಿ ಆರ್ಥಿಕ ಸಹಾಯ ಪಡೆಯದೆ ಹಾಗೂ ಸರ್ಕಾರವು ನಿರ್ವಹಿಸದ (ಉದಾಹರಣೆಗೆ ಸರ್ಕಾರೇತರ ಸಂಸ್ಥೆಗಳಿಂದ ಸ್ವಲ್ಪ ಮಟ್ಟಿಗೆ ಅನುಷ್ಠಾನಗೊಳಿಸಿ ನಡೆಸಲಾದ) ಈ ಪ್ರಯತ್ನಗಳು ಯೋಜನೆ ಮತ್ತು ಕಾರ್ಯಕ್ರಮ ಆಧಾರಿತ ಶಿಕ್ಷಣ ಅವಕಾಶಗಳನ್ನು ಒಳಗೊಂಡಿತ್ತು.

ನಗರ ಪ್ರದೇಶಗಳಲ್ಲಿ ವಯಸ್ಕರಿಗೆ ರಾತ್ರಿ ಶಲೆಗಳನ್ನು ಒಳಗೊಂಡಂತೆ ವಿವಿಧ ರೀತಿಯ ಪೂರೈಕೆ ವಿಧಾನಗಳನ್ನು ಪರಿಚಯಿಸುವುದಕ್ಕೆ 1970 ಮತ್ತು 1980 ರ ದಶಕಗಳು ಸಾಕ್ಷಿಯಾಯಿತು. ಬೃಹತ್ ಯೋಜನೆಗಳಾದ, ರಾಜಾಸ್ಥಾನದ ಲೋಕ್ ಜುಂಬಿಷ್ (LJ – Lok Jumbish), ಬಿಹಾರದ ಶಿಕ್ಷಣದ ಯೋಜನೆ (BEP– Bihar Education Project), ಉತ್ತರ ಪ್ರದೇಶದ ಮೂಲ ಶಿಕ್ಷಣ ಯೋಜನೆ (UPBEP- Uttar Pradesh Basic Education Project), ಆಂಧ್ರ ಪ್ರದೇಶದ ಪ್ರಾಥಮಿಕ ಶಿಕ್ಷಣ ಯೋಜನೆ (APPEP–Andhra Pradesh Primary Education Project) ಗಳನ್ನು ಪರಿಚಯಿಸಲಾಯಿತು. ಶಿಕ್ಷ ಕರ್ಮಿ ಯೋಜನೆ, ಮಹಿಳಾ ಸಮಾಕ್ಯಗಳಂತಹ NFE ಮೂಲಕ ಗಳಿಸಿದ ನಾವೀನ್ಯ ಅನುಭವಗಳು ಮತ್ತು ಸಂಪೂರ್ಣ ಸಾಕ್ಷರತಾ ಆಂಧೋಲನದ (TLC – Total Literacy Campaigns) ಮೂಲಕ ನಡೆದ ಸಾಮಾಜಿಕ ಕ್ರೋಢೀಕರಣ ಪ್ರಯತ್ನಗಳಿಂದ ಈ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಇವುಗಳನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (DPEP - District Primary Education Programme)) ದ ಮುಂಚೂಣಿಯ ಪ್ರಯತ್ನಗಳೆಂದು ಪರಿಗಣಿಸಬಹುದಾಗಿದೆ (Ghosh (ಗೋಷ್), 2004).

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು ತನ್ಮೂಲಕ 2002ರಲ್ಲಿ SSA (ಸರ್ವ ಶಿಕ್ಷಣ ಅಭಿಯಾನ) ದ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತು. SSA ವು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಖಚಿತ ಪಡಿಸಿಕೊಳ್ಳಲು ಕೇಂದ್ರದ ಧನ ಸಹಾಯ ಯೋಜನೆಯಾಗಿದೆ. SSAದ ಆಶ್ರಯದಲ್ಲಿ

ರಾಷ್ಟ್ರಮಟ್ಟದ 'EGS' (ಶಿಕ್ಷಣ ಖಾತರಿ ಯೋಜನೆಯು) ಔಪಚಾರಿಕ ಹಾಗೂ ಶಾಲಾ ವಿದ್ಯಾಭ್ಯಾಸಕ್ಕೆ ಭಿನ್ನವಾದ ವಿಧಾನಗಳ ಮೂಲಕ ಶಿಕ್ಷಣ ಅವಕಾಶವನ್ನು ಒದಗಿಸಿತು. ಈ ರೀತಿಯ ಶಿಕ್ಷಣದ ಪರ್ಯಾಯ ಕ್ರಮಗಳನ್ನು ಒಟ್ಟಾಗಿ ಶಿಕ್ಷಣದಲ್ಲಿನ ಪರ್ಯಾಯ ಪ್ರಯತ್ನ (AIE-Alternative Initiatives in Education)) ಗಳೆಂದು ಕರೆಯಲಾಯಿತು. ಈ ವಿಚಾರವನ್ನು ಮೂಲತಃ ಮಧ್ಯಪ್ರದೇಶದಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲಾಯಿತು. ಸರ್ಕಾರೇತರ ಸಂಘ ಸಂಸ್ಥೆಗಳ ಮೂಲಕ ಒದಗಿಸಲಾದರೂ ಶಿಕ್ಷಣದ ಅವಕಾಶಗಳಿಗಿರುವ ಪರ್ಯಾಯ ಮಾರ್ಗಗಳನ್ನು ಸರ್ಕಾರವೂ ಬಳಸಿಕೊಂಡಿತು.

ಪರ್ಯಾಯ ಶಾಲಾ ಕಾರ್ಯಕ್ರಮಗಳು ವಿಕಾಸಗೊಳ್ಳುತ್ತಿದ್ದಂತೆ, ದೇಶದ ವಿವಿಧ ಭಾಗಗಳಲ್ಲಿ ವ್ಯಾಪಕರೂಪದ ಕಾರ್ಯತಂತ್ರಗಳನ್ನು ಬಳಸಿಕೊಳ್ಳಲಾಯಿತು (ಗೋಷ್, 2004). ಬ್ರಿಡ್ಜ್ ಕೋರ್ಸ್‌ಗಳು(Bridge Courses), ಶಾಲೆಯ ಹೊರಗಿರುವ ಮಕ್ಕಳನ್ನು ಹಿಂತಿರುಗಿ ಪಡೆಯಲು ಅನೌಪಚಾರಿಕ ಮಾದರಿಯೊಂದನ್ನು ಬಳಸಿಕೊಂಡವು. ವಿವಿಧ ರಾಜ್ಯಗಳಲ್ಲಿ ಮೂಡಿ ಬಂದ ಈ ಕೆಳಗಿನ ಕಾರ್ಯತಂತ್ರಗಳನ್ನು ಗೋಷ್ (2004) ರವರು ತಿಳಿಸಿರುತ್ತಾರೆ:

- ದೂರದಲ್ಲಿರುವ ಮತ್ತು ಸೇವೆ ಒದಗಿಸಲಾಗದ ವಾಸಸ್ಥಳಗಳ ಮಕ್ಕಳಿಗಾಗಿರುವ ಪೂರ್ಣಾವಧಿಯ ಶಾಲೆಗಳು: ಆಂಧ್ರ ಪ್ರದೇಶದ ಬುಡಕಟ್ಟು ಮತ್ತು ಕರಾವಳಿ ಪ್ರದೇಶಗಳ ಸೇವೆಗಾಗಿರುವ ಸಮುದಾಯ ಶಾಲೆಗಳು, ಕೇರಳದ ಬುಡಕಟ್ಟು ಮತ್ತು ಕರಾವಳಿ ಪ್ರದೇಶದ ಬಹು–ತರಗತಿಯ (multi-grade) ಕೇಂದ್ರಗಳು, ಮಹಾರಾಷ್ಟ್ರದ ಕೆಲವು ಬುಡಕಟ್ಟಿನ ಜಿಲ್ಲೆಗಳಲ್ಲಿ ಒಪ್ಪಂದದ ಮೇರೆಗೆ ನಡೆಸಲಾಗುತ್ತಿರುವ ಶಾಲೆಗಳು(contract schools), ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿನ ಬಹುದೂರದ ವಾಸಸ್ಥಳಗಳಲ್ಲಿನ ಏಕ–ಶಿಕ್ಷಕರ ಬಹು–ತರಗತಿಯ ಶಾಲೆಗಳು ಮತ್ತು ಮಧ್ಯಪ್ರದೇಶದ EGS ಗಳನ್ನು ಇದು ಒಳಗೊಂಡಿದೆ.

- ದೀರ್ಘ ಹಾಗೂ ಅಲ್ಪ ಕಾಲಾವಧಿಯ ಶಿಬಿರಗಳು ಮತ್ತು ಬ್ರಿಡ್ಜ್ ಕೋರ್ಸ್‌ಗಳು: ಈ ಕೋರ್ಸ್‌ಗಳ ಗುರಿಯು ಸೂಕ್ತ ಕಲಿಕಾ ಹಂತಗಳನ್ನು ತಲುಪಿದ ನಂತರ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಔಪಚಾರಿಕ ಶಾಲೆಗಳಿಗೆ ಕರೆ ತರುವುದಾಗಿದೆ. 6 ರಿಂದ 8 ವಯಸ್ಸಿನ

ಮಕ್ಕಳಿಗಾಗಿ ಆಂಧ್ರ ಪ್ರದೇಶದಲ್ಲಿನ ಬೇಸಿಗೆ ಶಾಲೆಗಳು, ಕರ್ನಾಟಕ ಮತ್ತು ಉತ್ತರ ಪ್ರದೇಶದಲ್ಲಿನ 'ಮರಳಿ ಶಾಲೆಗೆ' ಕಾರ್ಯಕ್ರಮಗಳಂತಹ ಯೋಜನೆಗಳು ಈ ಗುಂಪಿನಲ್ಲಿ ಸೇರುತ್ತವೆ. ಆಂಧ್ರ ಪ್ರದೇಶದ ಅನೇಕ ಜಿಲ್ಲೆಗಳಲ್ಲಿ ಕಾರ್ಮಿಕರಾಗಿರುವ ದೊಡ್ಡ ಮಕ್ಕಳಿಗಾಗಿರುವ ದೀರ್ಘಾವಧಿಯ ವಸತಿ ಶಿಭಿರಗಳೂ ಇವೆ. ಆಂಧ್ರ ಪ್ರದೇಶದ ರಂಗಾರೆಡ್ಡಿ ಜಿಲ್ಲೆಯಲ್ಲಿನ ಎಂ.ವಿ. ಫೌಂಡೇಷನ್ ಪ್ರಾರಂಭಿಸಿರುವ ಮಾದರಿಯಲ್ಲಿ ಇವುಗಳನ್ನು ಸಂಘಟಿಸಲಾಗಿದೆ.

- ರಜಾ ವೇಳೆಯಲ್ಲಿ ಬ್ರಿಡ್ಜ್ ಕೋರ್ಸ್‌ಗಳನ್ನು ಒದಗಿಸಲಾಗುವ ಪರಿಹಾರಕ ಪಾಠಗಳು: ಅನಿಯಮಿತ ಹಾಜರಿ ಮತ್ತು ಕುಟುಂಬಗಳ ಕಾಲಿಕ ವಲಸೆಯಿಂದಾಗಿ ವ್ಯಾಸಾಂಗದಲ್ಲಿ ಹಿಂದುಳಿದ ಮಕ್ಕಳಿಗಾಗಿ ಪರಿಹಾರಕ ಪಾಠಗಳನ್ನು ಒದಗಿಸಲಾಗುವುದು. ಉದಾಹರಣೆಗೆ ಗುಜರಾತನಲ್ಲಿ ಪೋಷಕರೊಡನೆ ಸಕ್ಕರೆ ಕಾರ್ಖಾನೆಗಳಿಗೆ ವಲಸೆ ಬಂದ ಮಕ್ಕಳ ಅಗತ್ಯಕ್ಕಾಗಿ ಔಪಚಾರಿಕ ಶಾಲೆಯ ಶಿಕ್ಷಕರೊಬ್ಬರು ಸಂಕುಚಿಸಲ್ಪಟ್ಟ ಕೋರ್ಸ್‌ಗಳನ್ನು ನಡೆಸುತ್ತಾರೆ. ಮಕ್ಕಳು ಮರಳಿ ಬಂದಾಗ, ಅವರ ವ್ಯಾಸಂಗಕ್ಕೆ ಅಡ್ಡಿಬರದಂತೆ ಅವರುಗಳನ್ನು ಔಪಚಾರಿಕ ಶಾಲೆಯ ಮುಖ್ಯವಾಹಿನಿಗೆ ಸೇರಿಸಲಾಗುವುದು.

- ಕಬ್ಬುಗದ್ದೆಗಳು ಮತ್ತು ಉಪ್ಪಿನ ಪ್ರದೇಶಗಳಲ್ಲಿನ ವಲಸೆ ಕೆಲಸಗಾರರ ಮಕ್ಕಳಿಗಾಗಿ ಶಾಲೆಗಳು: ಮಕ್ಕಳು ಕಲಿಯುವುದನ್ನು ಮುಂದುವರಿಸಲು ಸಾಧ್ಯವಾಗುವಂತೆ ಕೆಲಸದ ಸ್ಥಳಗಳಲ್ಲಿ ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ವಲಸೆ ಕುಟುಂಬಗಳ ಮಾಲೀಕರುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಗುಜರಾತ ಮತ್ತು ಮಹಾರಾಷ್ಟ್ರ ರಾಜ್ಯಗಳು ಪ್ರಯತ್ನಿಸಿವೆ. ಹತ್ತಿರದ ಔಪಚಾರಿಕ ಶಾಲೆಯೊಂದರಿಂದ ಒಬ್ಬ ಶಿಕ್ಷಕನನ್ನು ಶಾಲೆ ನಡೆಸಲು ನಿಯೋಜಿಸಲಾಗುವುದು.

- ಹರೆಯದ ಬಾಲಕಿಯರಿಗೆ ವಿಶೇಷವಾಗಿ ವಿನ್ಯಾಸಗೊಳಿಸಿದ ಪಠ್ಯಕ್ರಮ ಹೊಂದಿರುವ ಶಾಲೆಗಳು: ಮುಖ್ಯವಾಗಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕಾರಣಗಳಿಂದ ಶಾಲೆಯ ಹೊರಗಿರುವ ಹರೆಯದ ಬಾಲಕಿಯರ

ಶಿಕ್ಷಣ ಒದಗಿಸುವಿಕೆಗೆ ಎರಡು ಉದಾಹರಣೆ ಎಂದರೆ ಬಿಹಾರದ ಅಂಗನ ವಿದ್ಯಾಲಯಗಳು ಮತ್ತು ಉತ್ತರ ಪ್ರದೇಶದ ಪ್ರೆಹರ್ ಪಾಠಶಾಲಾಗಳು.

- ನಗರ ಪ್ರದೇಶದ ವಂಚಿತ ಮಕ್ಕಳ ಶಿಕ್ಷಣಕ್ಕಾಗಿರುವ ಕಾರ್ಯತಂತ್ರಗಳು: ನಗರ ಪ್ರದೇಶಗಳಿಗೆ ವಲಸೆಯು ಅನೇಕ ಬಾರಿ ಶಿಕ್ಷಣಕ್ಕೆ ಅಡಚಣೆ ಉಂಟುಮಾಡುತ್ತದೆ. ಗುಜರಾತ, ಉತ್ತರ ಪ್ರದೇಶ ಮತ್ತಿತರ ರಾಜ್ಯಗಳಲ್ಲಿನ DPEP ಯ AS ಕಾರ್ಯಕ್ರಮಗಳು ನಗರ ಪ್ರದೇಶದ ಕೊಳೆಗೇರಿಗಳ ಈ ಸಮಸ್ಯೆಗಳನ್ನು ನಿವಾರಿಸುವ ಪ್ರಯತ್ನಗಳಾಗಿವೆ. ಮಕ್ಕಳನ್ನು ಔಪಚಾರಿಕ ಶಾಲೆಗಳಲ್ಲಿ ಮರಳಿ ದಾಖಲಾತಿ ಮಾಡಿಕೊಳ್ಳುವ ಮೊದಲು, ಅವರುಗಳು ಶಿಕ್ಷಣದ ಅಭಾವವಿರುವುದನ್ನು ಸರಿಪಡಿಸಿಕೊಳ್ಳಲು ಸಹಾಯ ಮಾಡುವ ವಿಶೇಷ ಕಾರ್ಯಕ್ರಮಗಳನ್ನು ಒದಗಿಸಲಾಗುತ್ತದೆ.

- ಮಕ್ತಾಬ್(maktabs) ಮತ್ತು ಮದ್ರಸಾಗಳಿಗೆ ನೆರವು: ಧಾರ್ಮಿಕ ಶಿಕ್ಷಣ ನೀಡುತ್ತಿರುವ ಸಾಂಪ್ರದಾಯಿಕ ಮಕ್ತಾಬ್ ಮತ್ತು ಮದ್ರಸಾಗಳಲ್ಲಿನ ಶಿಕ್ಷಕರುಗಳಿಗೆ ಪೂರಕ ತರಬೇತಿ ನೀಡುವುದರ ಮೂಲಕ ಮುಸ್ಲಿಂ ಸಮುದಾಯದ ಬಾಲಕಿಯರನ್ನು ತಲುಪುವುದು ಈ ಯೋಜನೆಯ ಉದ್ದೇಶವಾಗಿದೆ. ಮುಸ್ಲಿಂ ಸಮುದಾಯದ ಬಾಲಕಿಯರು ಮೂಲ ಶಿಕ್ಷಣ ಹೊಂದಲು ಅಸ್ಸಾಂ ಮತ್ತು ಉತ್ತರಪ್ರದೇಶದಲ್ಲಿ ಈ ಕಾರ್ಯಕ್ರಮಗಳು ಸಹಾಯ ಮಾಡಿವೆ.

- ವ್ಯವಸಾಯ ಹಸನಾಗಿರದ ಕಾಲದಲ್ಲಿ ವಲಸೆ ಹೋಗುವ ಕುಟುಂಬಗಳ ಮಕ್ಕಳಿಗಾಗಿರುವ ಕಾಲಿಕ ವಸತಿ ನಿಲಯಗಳು: ವಲಸೆ ಕುಟುಂಬಗಳ ಮಕ್ಕಳು ತಮ್ಮ ವ್ಯಾಸಂಗದಲ್ಲಿ ಹಿಂದೆ ಬೀಳದಂತೆ ಈ ವಸತಿ ನಿಲಯಗಳು ಸಹಾಯ ಮಾಡುತ್ತವೆ. ಕಾಲಿಕವಾಗಿ ಪೋಷಕರು ನಗರ ಸ್ಥಳಗಳಿಗೆ ಕೆಲಸವನ್ನು ಅರಸಿ ವಲಸೆ ಹೋದಾಗ ಅವರ ಮಕ್ಕಳು ತಮ್ಮ ವ್ಯಾಸಂಗವನ್ನು ಮುಂದುವರಿಸಲು ಸಾಧ್ಯವಾಗುವಂತೆ ತಮ್ಮ ಹಳ್ಳಿಗಳಲ್ಲಿನ ತಾತ್ಕಾಲಿಕ ವಸತಿ ನಿಲಯಗಳಲ್ಲಿ ಮಕ್ಕಳನ್ನು ಉಳಿಸಿಕೊಳ್ಳಲು ಗುಜರಾತನಲ್ಲಿ ಸಣ್ಣ ಪ್ರಮಾಣದ ಪ್ರಯೋಗಗಳು ನಡೆದಿವೆ.

ಅನೇಕ ರೀತಿಯಲ್ಲಿ, 'ಸಮಾನತೆ'ಯಿಂದ ಹೆಚ್ಚಿನ ವ್ಯವಿಧ್ಯತೆಯ ಕಡೆಗಿನ ವಿಕಸನವು ತನ್ನ ಜೊತೆಯಲ್ಲಿ ನಮ್ಯತೆಯನ್ನು ತಂದಿದೆ ಹಾಗೂ ಬಹುದೂರದಲ್ಲಿರುವ ಮತ್ತು ಮೂಲೆಗುಂಪುಗಳ ಶಿಕ್ಷಣ ಅವಕಾಶಕ್ಕೆ ಸಣ್ಣ ಪ್ರಮಾಣದಲ್ಲಾದರೂ ಸಹಾಯ ಮಾಡಿದೆ ಎಂದು ಗೋಷ್ (2004) ರವರು ಒಪ್ಪಿಕೊಳ್ಳುತ್ತಾರೆ. ಸರ್ಕಾರೇತರ ಸಂಸ್ಥೆಗಳಿಗೆ ತೆರೆಯಲಾದ NFE ಯೋಜನೆಗಳು ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ (NPE) (ಭಾರತ ಸರ್ಕಾರ, 1986) ಯ ನವೀಕರಿಸಲ್ಪಟ್ಟ ಬದ್ಧತೆಯು ಈ ರೀತಿಯ ಬಡ, ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಮತ್ತು ಮೂಲೆಗುಂಪಿಗೆ ಸೇರಿದ ಮಕ್ಕಳ ಪರಿಸ್ಥಿತಿಗಳು ಮತ್ತು ಅಗತ್ಯಗಳು ಪ್ರಾಥಮಿಕ ಶಿಕ್ಷಣವನ್ನು ಅವರಿಗೆ ಒದಗಿಸುವ ಅನಿವಾರ್ಯತೆಯ ಕಡೆ ಗಮನ ಸೆಳೆಯಲು ಸಾಧ್ಯವಾಯಿತು ಎಂದು ಅವರು ತಿಳಿಸಿರುತ್ತಾರೆ. ರಾಜಸ್ಥಾನದಲ್ಲಿನ ಶಿಕ್ಷ ಕರ್ಮಿ ಯೋಜನೆಯ ಉದಾಹರಣೆಯನ್ನು ಗೋಷ್ (2004) ರವರು ಕೊಟ್ಟಿರುತ್ತಾರೆ. ಇದರಲ್ಲಿ ಶಿಕ್ಷ ಕರ್ಮಿಗಳು ಪ್ರಾಥಮಿಕ ಶಾಲೆಗಳ ಲಭ್ಯವಿರುವ ಕಟ್ಟಡಗಳನ್ನು ಬಳಸಿಕೊಂಡು ಮಕ್ಕಳಿಗೆ ಪಾಠ ಮಾಡುತ್ತಾರೆ. ಬುಡಕಟ್ಟಿನ ಸ್ಥಳಗಳಲ್ಲಿ NFEಯನ್ನು ಅಳವಡಿಸಲು ಹೆಚ್ಚಿನ ನಾವೀನ್ಯ ಕಾರ್ಯಗಳನ್ನು ಮಾಡಲಾಗಿದೆ. ಉದಾಹರಣೆಗೆ, ಕೆಲಸ ಮಾಡುವ ಮಕ್ಕಳಿಗಾಗಿ ರಾತ್ರಿ ಶಾಲೆಗಳು ಮತ್ತು ಹೊಸ ಚಟುವಟಿಕೆ ಆಧಾರಿತ ಬೋಧನಾ ಶಾಸ್ತ್ರ ಹಾಗೂ ಈ ಕಾರ್ಯಕ್ರಮಗಳಿಗೆ ಸಮುದಾಯದ ಬೆಂಬಲವನ್ನು ಪಡೆಯುವುದಾಗಿದೆ (ಗೋಷ್, 2004).

## 2.3 ಖಾಸಗಿ ಶಾಲೆಗಳು

ಖಾಸಗಿ ಶಾಲೆಗಳು ಖಾಸಗಿ ಕ್ಷೇತ್ರದಲ್ಲಿ ಸ್ಥಾಪಿಸಲ್ಪಟ್ಟು, ನಿರ್ವಹಿಸಲ್ಪಡುತ್ತದೆ. ಭಾರತದಲ್ಲಿ ಖಾಸಗಿ ಕ್ಷೇತ್ರದಲ್ಲಿ ನಿರ್ವಹಿಸಲ್ಪಡುವ ಶಾಲೆಗಳನ್ನು ಅನುದಾನಿತ, ಅನುದಾನ ಪಡೆಯದ, ಮಾನ್ಯತೆ ಪಡೆದ ಹಾಗೂ ಮಾನ್ಯತೆ ಪಡೆಯದವುಗಳೆಂದು ವಿವಿಧ ರೀತಿಯಲ್ಲಿ ವರ್ಣಿಸಬಹುದಾಗಿದೆ.

ಮುಂದುವರಿದು ವಿವರಿಸುವುದಾದರೆ, ಸರ್ಕಾರ ಒದಗಿಸುವ ಅನುದಾನದಿಂದ ಹೆಚ್ಚಿನ ಸಂಖ್ಯೆಯ ಖಾಸಗಿ ಶಾಲೆಗಳು ನಡೆಸಲ್ಪಡುತ್ತದೆ, ಆದ್ದರಿಂದ ಅವುಗಳನ್ನು ಅನುದಾನಿತ ಖಾಸಗಿ ಶಾಲೆಗಳೆಂದು ಕರೆಯುತ್ತಾರೆ. ಅವುಗಳು ಸರ್ಕಾರ ಮತ್ತು ಖಾಸಗಿ ಕ್ಷೇತ್ರದ ಒಂದು ರೀತಿಯ ಸಹಭಾಗಿತ್ವವನ್ನು ಪ್ರತಿನಿಧಿಸುತ್ತದೆ. ಅನೇಕ ಸ್ಥಳಗಳಲ್ಲಿ ದಾನಿಗಳಿಂದ ಪ್ರಾರಂಭಿಸಲಾದ ಶಾಲೆಗಳು ಉಳಿಯಲು ಹೆಣಗಾಡುತ್ತಿದ್ದವು. ಈ ಶಾಲೆಗಳನ್ನು ಸರ್ಕಾರಿ ಶಾಲೆಗಳೆಂದು ಪರಿವರ್ತಿಸಲಾಯಿತು ಮತ್ತು ಅಲ್ಲಿನ ಶಿಕ್ಷಕರು ಸಂಬಳ ಪಡೆಯುವ ಸರ್ಕಾರಿ ನೌಕರರಾದರು. ಇನ್ನು ಬೇರೆ ಸಂದರ್ಭಗಳಲ್ಲಿ, ಖಾಸಗಿ ಶಾಲೆಗಳನ್ನು ಸ್ವತಂತ್ರವಾಗಿ ಅಥವಾ ಸರ್ಕಾರದ ಜೊತೆ ಸಹಭಾಗಿತ್ವದ ಒಪ್ಪಂದದ ಮೂಲಕ ನಡೆಸಲಾಗುತ್ತಿತ್ತು. ಇವುಗಳನ್ನು ಅನುದಾನಿತ ಶಾಲೆಗಳೆಂದು ಕರೆಯಲಾಯಿತು. ವಸಾಹತು ಕಾಲದ

ಅನೇಕ ನಗರಗಳಲ್ಲಿ ಅನುದಾನಿತ ಶಾಲೆಗಳು ಹಿರಿಯ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮಿಕ ಶಿಕ್ಷಣ ಒದಗಿಸುವ ಅಧಿಕೃತ ಹಾಗೂ ಏಕಮಾತ್ರ ಸಾಧನವಾಗಿತ್ತು. ಇದಕ್ಕೆ ವಿರುದ್ಧವಾಗಿ ಅನುದಾನವಿಲ್ಲದ ಶಾಲೆಗಳು ಸರ್ಕಾರದಿಂದ ಧನ ಸಹಾಯ ಪಡೆಯುತ್ತಿರಲಿಲ್ಲ.

ಅನೇಕ ಶಾಲೆಗಳು ಮಾನ್ಯತೆ ಪಡೆದಿದ್ದವಾಗಿರುತ್ತದೆ (ಸ್ಥಳೀಯ ಅಧಿಕಾರಿಗಳಿಂದ ನೋಂದಣಿಸಲ್ಪಟ್ಟಿದ್ದವು), ಆದರೆ ಮತ್ತಿತರ ಶಾಲೆಗಳು ಮಾನ್ಯತೆ ಪಡೆದಿರುವುದಿಲ್ಲ. ಆದ್ದರಿಂದ ಅನೇಕ ಬಾರಿ ಅಂಕಿ–ಅಂಶಗಳಿಂದ ಸೇರ್ಪಡೆಯಾಗಿರಲಿಲ್ಲ. ಶಾಲೆಗಳ ಮಾನ್ಯತೆಗೆ ಸಂಬಂಧಿಸಿದ ಕಾನೂನು, ನಿಯಮಗಳು ಅಥವಾ ಕಾರ್ಯನಿರ್ವಾಹಕ ನಿರ್ದೇಶನಗಳಿಗೆ ಅನುಗುಣವಾಗಿ ವಿಧಿವತ್ತಾಗಿ ಅಧಿಕಾರ ಪಡೆದ ಪ್ರಾಧಿಕಾರ (ಸರ್ಕಾರ ಅಥವಾ ಸರ್ಕಾರದಿಂದ ಅಧಿಕಾರ ಪಡೆದಂತಹ) ವು ಮಾನ್ಯತೆ ಪಡೆದ ಶಾಲೆಗಳಿಗೆ ಮಾನ್ಯತೆಯನ್ನು ಮಂಜೂರು ಮಾಡುತ್ತದೆ. ಅನುದಾನವನ್ನು ಪಡೆಯುತ್ತಾರೋ ಇಲ್ಲವೋ, ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಶಾಲೆಗಳು ಅನುದಾನಕ್ಕೆ ಒಳಪಟ್ಟ ಶಾಲೆಗಳ ಒಟ್ಟಾರೆಯ ಕಾನೂನು ನಿಯಮಗಳ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತದೆ. ಮಾನ್ಯತೆ ಪಡೆದ ಶಾಲೆಗಳು ಆಗಿಂದಾಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ತಮ್ಮ ಚಟುವಟಿಕೆಗಳ ಬಗ್ಗೆ ವರದಿ ನೀಡಬೇಕಾಗುತ್ತದೆ ಮತ್ತು ಶಿಕ್ಷಕರುಗಳ ನೇಮಕಾತಿ ಮತ್ತು ಮೂಲ ಸೌಕರ್ಯಗಳ ಒದಗಿಸುವಿಕೆಗೆ ಸಂಬಂಧಿಸಿದಂತೆ ಗೊತ್ತುಪಡಿಸಿದ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಮಾನ್ಯತೆಯು ಈ ನಿಬಂಧನೆಗಳ ನಿರಂತರ ಅನುಸರಣೆಗೆ ಸಂಬಂಧಿಸಿದೆ. ಇಲಾಖೆಯು ಮಾನ್ಯತೆ ಪಡೆದ ಶಾಲೆಗಳ ತನಿಖೆ ಮತ್ತು ಮೇಲ್ವಿಚಾರಣೆ ಮಾಡುತ್ತದೆ ಮತ್ತು ಕಾರ್ಯವಿಧಾನಗಳ ಉಲ್ಲಂಘನೆ ಕಂಡುಬಂದರೆ ಮಾನ್ಯತೆಯನ್ನು ಹಿಂದಕ್ಕೆ ಪಡೆಯಬಹುದಾಗಿದೆ. ಮಾನ್ಯತೆ ಪಡೆಯದ ಶಾಲೆಗಳನ್ನು ಮೇಲ್ವಿಚಾರಣೆಗೆ ಒಳಪಡಿಸುವುದಿಲ್ಲ ಅಲ್ಲದೆ ಅವುಗಳನ್ನು ಸರ್ಕಾರದ ಅಂಕಿ–ಅಂಶಗಳಲ್ಲಿ ಸೇರಿಸಲಾಗುವುದಿಲ್ಲ. ಮಾನ್ಯತೆ ಪಡೆಯದ ಶಾಲೆಗಳ ಬಗ್ಗೆ ಹೆಚ್ಚಿನ ಚರ್ಚೆಗಾಗಿ ವಿಭಾಗ 4.1ನ್ನು ನೋಡಿ. ಕೆಲವು ರಾಜ್ಯಗಳಲ್ಲಿ ಸಂಖ್ಯೆಯಲ್ಲಿ ಅಧಿಕವಾಗುತ್ತಿರುವ ಕಡಿಮೆ ವೆಚ್ಚದ, ಖಾಸಗಿ ಶಾಲೆಗಳ ಬಗ್ಗೆ ಹೆಚ್ಚುತ್ತಿರುವ ಸಾಹಿತ್ಯ ಲಭ್ಯವಿದೆ. (ಉದಾ: (Tooley and Dixon (ಟುಲಿ ಮತ್ತು ಡಿಕ್ಸನ್), 2003). ಇದನ್ನು ಹರ್ಮಾ (Harma) (2010) ರವರು ಪರಿಶೀಲಿಸುತ್ತಾ, ಎಲ್ಲಿ ಸರ್ಕಾರಿ ಶಾಲೆಗಳ ಗುಣಮಟ್ಟ ಕಡಿಮೆ ಇದೆಯೆಂದು ಗುರುತಿಸಲ್ಪಡುತ್ತದೆಯೋ ಅಲ್ಲಿ ಮಾರುಕಟ್ಟೆ ಅಗತ್ಯಕ್ಕೆ ಪ್ರತಿಕ್ರಿಯಿಸುವಂತಹ ಶಾಲೆಗಳು ಏಳಿಗೆಯಾಗುತ್ತವೆಯಾದರೂ, ವೆಚ್ಚವನ್ನು ಕೊಡಲಾಗದ ಕಡು ಬಡವರಿಗೆ ಅಂತಹ ಅವಕಾಶವು ಲಭ್ಯವಿರುವುದಿಲ್ಲವೆಂದು ಅವರು ವಾದಿಸುತ್ತಾರೆ.

### 2.4 ಅರೆ-ಸರ್ಕಾರಿ ಶಾಲೆಗಳು

ಅರೆ ಸರ್ಕಾರಿ ಶಾಲೆಗಳು ಸಾಮಾನ್ಯವಾಗಿ ಸಶಸ್ತ್ರ ಯೋಧರಿಗೆ ಸಂಬಂಧಿಸಿದೆ. ಈ ಶಾಲೆಗಳು ವಿಶಿಷ್ಟವಾಗಿ ಖಾಸಗಿ ಶಾಲೆಗಳೂ ಅಲ್ಲ ಅಥವಾ ಸರ್ಕಾರದಿಂದ ಸ್ಥಾಪಿತವಾದವೂ ಅಲ್ಲ/ ಬಹಿರಂಗವಾಗಿ ಅನುದಾನ ಪಡೆಯುವಂತಹದ್ದೂ ಅಲ್ಲ. ಇವುಗಳು, ಸರ್ಕಾರದ ನಿಬಂಧನೆಗಳಿಂದ ಮುಕ್ತವಾಗಿದ್ದು ಖಾಸಗಿ ಶಾಲೆಗಳ ಲಕ್ಷಣಗಳನ್ನು ಹೊಂದಿರುತ್ತದೆ. ಆದರೆ, ಅದೇ ಸಮಯದಲ್ಲಿ ಪ್ರತಿಷ್ಠಿತ ಸರ್ಕಾರಿ ಸೇವೆಗಳೊಂದಿಗೆ ಸಂಬಂಧವಿರುವುದರಿಂದಾಗಿ ಸಾರ್ವಜನಿಕ ಹಣ, ಸವಲತ್ತುಗಳನ್ನು ಶಿಕ್ಷಣ ಇಲಾಖೆಯ ಮೂಲಕ ಪಡೆಯದಿದ್ದರೂ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಅವುಗಳು ಪಡೆದಿವೆ ಎಂದು ಹೇಳಲಾಗಿದೆ. ಈ ಶಾಲೆಗಳು ಗಣ್ಯರಿಗಾಗಿರುವುದೆಂದು ಅನೇಕ ಬಾರಿ ಪರಿಗಣಿಸಲ್ಪಡುತ್ತದೆ. ಅವುಗಳು ಪಡೆಯುವ ಧನ ಸಹಾಯದ ಬಗ್ಗೆ ಪಾರದರ್ಶಕತೆ ಕಡಿಮೆ ಎಂಬ ಗ್ರಹಿಕೆ ಇದೆ ಮತ್ತು ಇತ್ತೀಚಿನ ವರ್ಷಗಳಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ವಿಚಾರಗಳಿಗೆ ಸಂಬಂಧಪಟ್ಟ ಹಾಗೆ ಪ್ರಶ್ನೆಗಳನ್ನು ಎತ್ತಲಾಗಿದೆ. ಈ ಶಾಲೆಗಳನ್ನು ಖಾಸಗಿ ಅಥವಾ ಸರಕಾರಿ ಎಂದು ಪರಿಗಣಿಸುವ ನಿರ್ಧಾರ ಮಸುಕಾಗಿಯೇ ಉಳಿದಿದೆ.

ಇವುಗಳು, ಲಾಭದಾಯಕವಲ್ಲದ ಸಂಸ್ಥೆಯೆಂದು ನೋಂದಾಯಿಸಲಾದ **'ಸಂಘ'** ಗಳ ಮೂಲಕ ಸರ್ಕಾರದ ನಿರ್ದಿಷ್ಟ ಸೇವೆಗಳಲ್ಲಿನ ಅಧಿಕಾರಿಗಳು ಅಥವಾ ಅವರ ಪತ್ನಿಯರಿಂದ ಪ್ರಾರಂಭಿಸಲ್ಪಟ್ಟ ಶಾಲೆಗಳಾಗಿರಬಹುದು. ಇವರಿಂದ ಸ್ಥಾಪಿಸಲ್ಪಟ್ಟ ಶಾಲೆಗಳು ಸಾಮಾನ್ಯವಾಗಿ ನಿರ್ದಿಷ್ಟ ಸೇವಾ ವಿಭಾಗದ ಹೆಸರನ್ನು ಒಳಗೊಂಡಿರುತ್ತದೆ (ಉದಾಹರಣೆಗೆ 'Naval Primary School'(ನೌಕಾ ಪ್ರಾಥಮಿಕ ಶಾಲೆ)) ಮತ್ತು ಅವುಗಳು ನಿರ್ದಿಷ್ಟ ವಿಭಾಗದ ಸರ್ಕಾರಿ ನೌಕರರ ಮಕ್ಕಳಿಗೆ ಮುಖ್ಯವಾಗಿ ಅವಕಾಶ ಕಲ್ಪಿಸುತ್ತದೆ. ಅರೆ-ಸರ್ಕಾರಿ ಶಾಲೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ವಿಭಾಗ 4.3ರಲ್ಲಿ ಚರ್ಚಿಸಲಾಗಿದೆ.

## 3. ಸರ್ಕಾರಿ ಮತ್ತು ಖಾಸಗಿ ಶಾಲೆಗಳು:ವ್ಯಾಪನೆ, ದಾಖಲಾತಿಯ ಪಾಲು, ಸಂರಚನೆ, ವೆಚ್ಚ ಮತ್ತು ಸೌಲಭ್ಯಗಳು:

### 3.1 ಶಾಲೆಗಳ ಪಾಲು

ಭಾರತದಲ್ಲಿ, ಇತ್ತೀಚಿನ ವರ್ಷಗಳಲ್ಲಿ ಶಾಲಾ ವಿದ್ಯಾಭ್ಯಾಸದ ಖಾಸಗಿ ಅವಕಾಶಗಳ ಪೂರೈಕೆಯು ಬೆಳೆಯುತ್ತಿದೆ. ಸರ್ಕಾರದ ಆಯ್ದ ಶೈಕ್ಷಣಿಕ ಅಂಕಿ-ಅಂಶಗಳ (Selected Educational

Statistics of the Government of India)ಪ್ರಕಾರ ಶೇ.90ಕ್ಕಿಂತ ಹೆಚ್ಚಿನ ಪ್ರಾಥಮಿಕ ಶಾಲೆಗಳು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ನಡೆಸಲಾಗುತ್ತಿದ್ದರೂ ಖಾಸಗಿ ಕ್ಷೇತ್ರದ ಪೂರೈಕೆಯ ಪಾಲು ಮತ್ತಷ್ಟು ಹೆಚ್ಚಾಗಿದೆ (ಕೋಷ್ಟಕ 2ನ್ನು ನೋಡಿ). 1973–74 ರಿಂದ 2004–05ರ ಅವಧಿಯಲ್ಲಿ ಖಾಸಗಿ–ಅನುದಾನಿತ ಕ್ಷೇತ್ರದ ಪೂರೈಕೆಯನ್ನು ಅದರ ಹಿಂದಿನ ಪಾಲಿಗೆ ಹೋಲಿಸಿದಾಗ ಹೆಚ್ಚು ಕಡಿಮೆ ಅರ್ಧಕ್ಕೆ ಹಾಗೂ ಹಿರಿಯ ಪ್ರಾಥಮಿಕ ಹಂತಕ್ಕೆ ಸಂಬಂಧಿಸಿದಂತೆ ಕೇವಲ 1/3 ರಷ್ಟಕ್ಕೆ ಕುಸಿದಿದೆ.

**ಕೋಷ್ಟಕ 2: ಭಾರತದಲ್ಲಿ 1973–74 ಮತ್ತು 2004–05 ಅವಧಿಯಲ್ಲಿ ವಿವಿಧ ಬಗೆಯ ಆಡಳಿತ ವ್ಯವಸ್ಥೆ ಆಶ್ರಯದಲ್ಲಿನ ಶೇಕಡಾವಾರು ಶಾಲೆಗಳು**

| ಶಾಲೆಯ ವಿಧ | ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆಗಳ ಶಾಲೆಗಳು (%) | ಖಾಸಗಿ–ಅನುದಾನಿತ ಶಾಲೆಗಳು (%) | ಖಾಸಗಿ– ಅನುದಾನ ಪಡೆಯದ ಶಾಲೆಗಳು (%) |
|---|---|---|---|
| **ಪ್ರಾಥಮಿಕ ಶಾಲೆ** | | | |
| 1973–74 | 93.3 | 5.0 | 1.6 |
| 2004–05 | 90.2 | 2.6 | 7.2 |
| **ಹಿರಿಯ ಪ್ರಾಥಮಿಕ ಶಾಲೆ** | | | |
| 1973–74 | 77.6 | 17.8 | 4.7 |
| 2004–05 | 72.2 | 6.4 | 21.4 |
| **ಮಾಧ್ಯಮಿಕ / ಹಿರಿಯ ಮಾಧ್ಯಮಿಕ** | | | |
| 1973–74 | 37.4 | 57.0 | 5.6 |
| 2004–05 | 41.1 | 29.4 | 29.6 |

ಮೂಲ: ಭಾರತ ಸರ್ಕಾರ, 2007

ಆದರೂ ಕೋಷ್ಟಕ 2ರಲ್ಲಿರುವ ಅಂಕಿ–ಅಂಶಗಳು ಖಾಸಗಿ ಕ್ಷೇತ್ರದ ಪಾಲು ಎಷ್ಟೆಂಬುದನ್ನು ನಿಖರವಾಗಿ ಪ್ರತಿನಿಧಿಸುತ್ತದೆ ಎಂಬ ಅಂಶ ಅನಿಶ್ಚಿತ. ಸರ್ಕಾರದ ಅಂಕಿ–ಅಂಶ ಕಲೆ ಹಾಕುವ ಪ್ರಯತ್ನಗಳು ಸಾಮಾನ್ಯವಾಗಿ ಮಾನ್ಯತೆ ಪಡೆದ ಶಾಲೆಗಳಿಗೆ ಸೀಮಿತವಾಗಿರುತ್ತದೆ ಮತ್ತು ಮಾನ್ಯತೆ ಪಡೆಯದ ಹೆಚ್ಚಿನ ಶಾಲೆಗಳನ್ನು ಎಣಿಕೆಗೆ ಪರಿಗಣಿಸದೇ ಇರಬಹುದು.

ರಾಜ್ಯ ಸರ್ಕಾರದ ಶಾಲೆಗಳು ಮತ್ತು ಅನುದಾನಿತ ಶಾಲೆಗಳಿಗೆ ಸಂಬಂಧಿಸಿದ ಶಾಲಾ ಶಿಕ್ಷಣದ ಅಂಕಿ–ಅಂಶಗಳು ಸಾಮಾನ್ಯವಾಗಿ ಹೆಚ್ಚು ನಿಖರವಾಗಿರುತ್ತವೆ. ಕೆಲವು ಅಂಕಿ–ಅಂಶ ಸಂಗ್ರಹಿಸುವ ಪ್ರಯತ್ನಗಳಲ್ಲಿ ಕೇಂದ್ರ ಸರ್ಕಾರ ಮತ್ತು ಖಾಸಗಿ ಶಾಲೆಗಳ ಸಹಕರಿಸುವಿಕೆ ಕಡಿಮೆಯದಾಗಿತ್ತು. ಮೆಹ್ತಾ (2006)ರವರ ಪ್ರಕಾರ, ಶಾಲಾ ಮಾಹಿತಿ ಅನುಸೂಚಿಯನ್ನು ಶಾಲೆಗಳು ಹೇಗೆ ಭರ್ತಿ ಮಾಡುತ್ತವೆ ಎಂಬುದರ ಪರಿಣಾಮದಿಂದ DISE (District Information System for Education)ಅಂಕಿ–ಅಂಶಗಳು ಅಸಮಂಜಸತೆಗಳಿಗೆ ಒಳಗಾಗುತ್ತದೆ. 2005ರಲ್ಲಿ ಶಾಲಾ ಪೂರೈಕೆಯ ಇನ್ನೆರಡು ಅಂದಾಜುಗಳನ್ನು ಪ್ರಕಟಿಸಲಾಯಿತು (Pratham (ಪ್ರಥಮ್) 2005; the Indian Market Research Bureau (ಭಾರತೀಯ ಮಾರುಕಟ್ಟೆಯ ಸಂಶೋಧನಾ ಬ್ಯೂರೋ)). ಆದರೂ ಈ ಎರಡು ದತ್ತಾಂಶಗಳ ಸಮೂಹಗಳು ಖಾಸಗಿ ಕ್ಷೇತ್ರದ ಪಾಲನ್ನು ಅಂದಾಜು ಮಾಡಲು ಪ್ರಸ್ತುತವಲ್ಲ ಏಕೆಂದರೆ, ಅವುಗಳು ಗ್ರಾಮಾಂತರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು; ಆದರೆ ಖಾಸಗಿ ಶಾಲೆಗಳು ನಗರ ಪ್ರದೇಶಗಳಲ್ಲೇ ಹೆಚ್ಚಾಗಿ ಇರುವುದು.

ಕೆಲವು ಬಗೆಯ ಶಾಲೆಗಳ ಬಗ್ಗೆ ಇತ್ತೀಚಿನ DISE ವರದಿ (ಮೆಹ್ತಾ, 2007) ಯು ಪೂರ್ಣವಾಗಿಲ್ಲವೆಂದು ಒಪ್ಪಿಕೊಳ್ಳುತ್ತದೆ ಮತ್ತು ಮಾನ್ಯತೆ ಪಡೆದ ಎಲ್ಲಾ ಶಾಲೆಗಳನ್ನು DISE ವ್ಯಾಪ್ತಿಗೆ ಒಳಪಡಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಎಲ್ಲ ರೀತಿಯ ಪ್ರಯತ್ನಗಳಿದ್ದರೂ, 'ನವೋದಯ ವಿದ್ಯಾಲಯಗಳು, ಸೈನಿಕ ಶಾಲೆಗಳು, ಮಿಲಿಟರಿ ಶಾಲೆಗಳು, ಕಸ್ತೂರ್ಬಾ ಗಾಂಧಿ ಬಾಲಕಿಯರ ವಿದ್ಯಾಲಯಗಳು (KGBV–Kasturba Gandhi Balika Vidyalayas) ಯೋಜನೆ ಶಾಲೆಗಳು, ಕೇಂದ್ರಿಯ ವಿದ್ಯಾಲಯಗಳು, ಟಿಬೆಟೆನ್ ಶಾಲೆಗಳು, ಮತ್ತಿತರ ಖಾಸಗಿ ಆಡಳಿತ ಶಾಲೆಗಳಂತಹವುಗಳು DISE ಆಶ್ರಯದಲ್ಲಿ ಸೇರ್ಪಡೆಯಾಗಬೇಕಾಗಿದೆ ಆದರೆ ಅವುಗಳ ಸೇರ್ಪಡೆಯು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ' (ಮೆಹ್ತಾ, 2007:17) ಯೆಂದೂ ತಿಳಿಸುತ್ತದೆ.

ಪ್ರಾಥಮಿಕ ಶಾಲಾ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಶೇ. 17ರಷ್ಟು ಶಾಲೆ (ಕೋಷ್ಟಕ 3) ಗಳು ಖಾಸಗಿ ಆಡಳಿತದ್ದಾಗಿರುತ್ತದೆ ಎಂದು ಅಂದಾಜಿಸಲಾಗಿದೆ(DISE, 2007).

**ಕೋಷ್ಟಕ 3: ಆಡಳಿತ ವಿಧದ ಪ್ರಕಾರ ಪ್ರಾಥಮಿಕ ಶಾಲೆಗಳ ವಿತರಣೆ: 2005-06**

| ಆಡಳಿತದ ವರ್ಗೀಕರಣ | ಸರ್ಕಾರಿ ಆಡಳಿತದ ಶಾಲೆಗಳು | | ಖಾಸಗಿ ಆಡಳಿತದ ಶಾಲೆಗಳು | | ಶಾಲೆಗಳ ಒಟ್ಟು ಸಂಖ್ಯೆ |
|---|---|---|---|---|---|
| | ಶಾಲೆಗಳ ಸಂಖ್ಯೆ | 929,345 | ಶಾಲೆಗಳ ಸಂಖ್ಯೆ | 189,521 | 1,124,033 |
| | ಶಾಲೆಗಳ ಶೇ. | 83.1* | ಶಾಲೆಗಳ ಶೇ. | 16.9 | 100.00 |
| ಶಿಕ್ಷಣ ಇಲಾಖೆ | 69.7 | | ಖಾಸಗಿ ಅನುದಾನಿತ | 33.5 | |
| ಬುಡಕಟ್ಟು / ಸಮಾಜ ಕಲ್ಯಾಣ ಇಲಾಖೆ | 5.5 | | ಖಾಸಗಿ ಅನುದಾನ ಪಡೆಯದ | 66.5 | |
| ಸ್ಥಳೀಯ ಸಂಸ್ಥೆ | 24.0 | | | | |
| ಇತರ ಆಡಳಿತ ಮಂಡಳಿಗಳು | 0.8 | | | | |
| **ಸರ್ಕಾರ** | **100.00** | | **ಖಾಸಗಿ** | **100.00** | |

* ಶೇ. 0.46 ಪ್ರತಿಕ್ರಿಯೆ ನೀಡದ ಶಾಲೆಗಳನ್ನು ಒಳಗೊಂಡಿದೆ

ಮೂಲ: (ಕೋಷ್ಟಕ ಬಿ7), Mehta (ಮೆಹ್ತಾ), 2007

ಖಾಸಗಿ ಆಡಳಿತದ ಶಾಲೆಗಳಲ್ಲಿ ಶೇ.33.5 ರಷ್ಟು ಖಾಸಗಿ ಅನುದಾನಿತ ಮತ್ತು ಉಳಿದ ಶೇ.66.5 ರಷ್ಟು ಭಾಗ ಖಾಸಗಿ ಅನುದಾನ ಪಡೆಯದ ಶಾಲೆಗಳಾಗಿವೆ. ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಹಂತದಲ್ಲಿ ಶೇ. 60 ಶಾಲೆಗಳು ಖಾಸಗಿ ಆಡಳಿತದ್ದಾಗಿದೆ. ಕಳೆದ 3 ವರ್ಷಗಳಲ್ಲಿ ಖಾಸಗಿ ಆಡಳಿತದ ಶಾಲೆಗಳಿಗೆ ಹೋಲಿಸಿದರೆ ಸರ್ಕಾರಿ ಶಾಲೆಗಳು ಸಂಖ್ಯೆಯಲ್ಲಿ ಹೆಚ್ಚಾಗಿದ್ದರೂ '2002-03 ರಿಂದ 2005-06 ರ ಅವಧಿಯಲ್ಲಿ ಅವುಗಳು ಕಡಿಮೆಯಾಗುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ' ಎಂದು (ಮೆಹ್ತಾ,2007:32) DISE ವರದಿ (2007) ಯು ತಿಳಿಸುತ್ತದೆ. ಅನುಗುಣವಾಗಿ, ಖಾಸಗಿ ಆಡಳಿತ ಶಾಲೆಗಳ (ಅನುದಾನಿತ ಹಾಗೂ ಅನುದಾನಿತವಲ್ಲದ) ಸಂಖ್ಯೆಯಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಾಗಿದೆಯೆಂದೂ ವರದಿ ಹೇಳುತ್ತದೆ.

### 3.2 ದಾಖಲಾತಿಯ ಪಾಲು

ರಾಷ್ಟ್ರಮಟ್ಟದಲ್ಲಿ, ಪ್ರಾಥಮಿಕ ಹಂತದಲ್ಲಿ ಶೇ. 17.3 ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ ಶೇ.11.4 ಭಾಗ ಖಾಸಗಿ ಕ್ಷೇತ್ರದ ದಾಖಲಾತಿಯ ಪಾಲನ್ನು ಹೊಂದಿತ್ತೆಂದು 1995-96ರಲ್ಲಿ ಕುಟುಂಬಗಳಿಂದ NSS (National Sample Survey (ರಾಷ್ಟ್ರೀಯ ಮಾದರಿ ಸಮೀಕ್ಷೆ)) ನ 52ನೇ ಸುತ್ತಿನ ಮೂಲಕ (ಭಾರತ ಸರ್ಕಾರ, 1998) ಸಂಗ್ರಹಿಸಿದ ಅಂಕಿ-ಅಂಶಗಳು ಅಂದಾಜು

ಮಾಡುತ್ತದೆ. 1993ರಲ್ಲಿ NCAER (National Council of Applied Economic Research (ಅನ್ವಯಿಕ ಆರ್ಥಿಕ ಸಂಶೋಧನೆಗಾಗಿರುವ ರಾಷ್ಟ್ರೀಯ ಮಂಡಳಿ)) ನಡೆಸಿದ ಸಮೀಕ್ಷೆಯ ಪ್ರಕಾರ ಈ ಅಂಕಿಗಳು ಕ್ರಮವಾಗಿ ಶೇ.11.3 ಮತ್ತು 8.3 ಆಗಿತ್ತು.

ಕೋಷ್ಟಕ 2 ಮತ್ತು 3 ರಲ್ಲಿ ಕಂಡುಬರುವ ಅಂಕಿ ಅಂಶಗಳ ಪ್ರಕಾರ ಖಾಸಗಿ ಶಾಲೆಗಳ ಅನುಪಾತಕ್ಕಿಂತ, ಖಾಸಗಿ ಶಾಲೆಗಳು ಪ್ರಾಥಮಿಕ ಹಂತದಲ್ಲಿ ಹೊಂದಿರುವ ದಾಖಲಾತಿಯ ಪಾಲು ಹೆಚ್ಚಾಗಿದೆ ಎಂಬ ಅಂಶ ಕುತೂಹಲಕಾರಿಯಾಗಿದೆ. ಇನ್ನೊಂದೆಡೆ, ಹಿರಿಯ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಖಾಸಗಿ ಶಾಲೆ ಹಾಗೂ ಸರ್ಕಾರಿ ಶಾಲೆಗಳಿಗಿರುವ ಅನುಪಾತವು ಏರಿಕೆಯಾದರೂ ಅವುಗಳ ದಾಖಲಾತಿ ಪಾಲು ಇಳಿಮುಖವಾಗಿದೆ. ಮಾಧ್ಯಮಿಕ ಶಿಕ್ಷಣದ ಏರಿಕೆಯಾಗಿರುವ ವೆಚ್ಚದ ಹಿನ್ನೆಲೆಯಲ್ಲಿ ಈ ಹಂತದಲ್ಲಿ ಸರ್ಕಾರಿ ಶಾಲೆಗಳಲ್ಲಿನ ಅಧಿಕ ದಾಖಲಾತಿಯ ಪಾಲು ಬಹುಶಃ ಅನಿರೀಕ್ಷಿತವಲ್ಲವೆನಿಸುತ್ತದೆ.

### ೩.೩ ಶಾಲಾ ರಚನೆ

ಶಾಲೆಯ ರಚನೆಯು ಬಹಳ ಭಿನ್ನವಾಗಿರುತ್ತದೆ. ಭಾರತದಲ್ಲಿ ಶೇ. 3ರಷ್ಟು ಶಾಲೆಗಳು ಪೂರ್ಣಾವಧಿಯ ಶಾಲಾ ವಿದ್ಯಾಭ್ಯಾಸ (ಅಂದರೆ ಪ್ರಾಥಮಿಕದಿಂದ ಹಿರಿಯ ಮಾಧ್ಯಮಿಕದವರೆಗೆ) ಒದಗಿಸುತ್ತವೆ. ಇತರೆ ಶಾಲೆಗಳು ಒಂದು, ಬಹುಶಃ ಎರಡು ಮತ್ತು ಕೆಲವೊಮ್ಮೆ ಮೂರು ಹಂತದವರೆಗಿನ ಶಿಕ್ಷಣವನ್ನು ಒದಗಿಸುತ್ತವೆ.

ಭಾರತದಲ್ಲಿ ಪ್ರಾಥಮಿಕ ಶಿಕ್ಷಣವು ಸಾಮಾನ್ಯವಾಗಿ 1 ರಿಂದ 5 ತರಗತಿಗಳಿಗೆ ಸಂಬಂಧಿಸಿದೆಯಾದರೆ 6 ರಿಂದ 8 ರ ತರಗತಿಗಳು ಹಿರಿಯ ಪ್ರಾಥಮಿಕ ಎಂದು ಕರೆಯಲ್ಪಡುತ್ತದೆ. ಇದು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ. ಉದಾಹರಣೆಗೆ, 35 ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ 23 ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣವು 1 ರಿಂದ 5 ತರಗತಿಗಳನ್ನು ಹೊಂದಿದ್ದು ಉಳಿದ 12ರಲ್ಲಿ 1 ರಿಂದ 4 ತರಗತಿಗಳನ್ನು ಹೊಂದಿದೆ. ಮತ್ತು 22 ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಲ್ಲಿ ಹಿರಿಯ ಪ್ರಾಥಮಿಕ ಶಿಕ್ಷಣವು 6 ರಿಂದ 8 ತರಗತಿಗಳನ್ನು ಹೊಂದಿದ್ದು ಉಳಿದ 12 ರಜ್ಯಗಳಲ್ಲಿ 5 ರಿಂದ 7 ತರಗತಿಗಳನ್ನು ಹೊಂದಿದೆ. ಒಂದು ರಾಜ್ಯದಲ್ಲಿ (ಪಶ್ಚಿಮ ಬಂಗಾಳ) ಹಿರಿಯ ಪ್ರಾಥಮಿಕ ಹಂತವು ಈ ಎರಡೂ ಸ್ಥಾಪಿತ ವಿನ್ಯಾಸಗಳಿಗಿಂತ ಭಿನ್ನವಾಗಿದ್ದು 5 ರಿಂದ 8ನೇ ತರಗತಿಗಳನ್ನು ಒಳಗೊಂಡಿದೆ. ವ್ಯವಸ್ಥೆಯಲ್ಲಿನ ವೈವಿಧ್ಯತೆಯು ಬಹಳ ಮುಖ್ಯವಾದದ್ದು ಏಕೆಂದರೆ, 35 ರಾಜ್ಯಗಳಲ್ಲಿ 12 ರಲ್ಲಿ ಪ್ರಾಥಮಿಕ ಶಿಕ್ಷಣವು ಶಾಲಾ ವಿದ್ಯಾಭ್ಯಾಸದ ಅವಧಿಯಲ್ಲಿ ಒಂದು ವರ್ಷ ಕಡಿಮೆ ಹೊಂದಿದೆ,

ಅಂದರೆ 8 ವರ್ಷಗಳ ಬದಲು 7 ವರ್ಷದ್ದಾಗಿದೆ. ಅನೇಕ ವಿದ್ಯಾರ್ಥಿಗಳು (ಕೋಷ್ಟಕ 1 ನೋಡಿ) ಹಿರಿಯ ಪ್ರಾಥಮಿಕ ಶಿಕ್ಷಣದ ನಂತರ ಮತ್ತೆ ಕೆಲವರು ಶಾಲೆಯಲ್ಲಿ ಕೇವಲ 7 ವರ್ಷ ಕಳೆದ ನಂತರ ಶಾಲೆಯನ್ನು ಬಿಡುತ್ತಾರೆ.

**ಕೋಷ್ಟಕ 4: ಭಾರತದಲ್ಲಿ ಶಾಲಾ ರಚನೆಯ ವೈವಿಧ್ಯತೆ**

| | **ಶಾಲೆಯ ವರ್ಗೀಕರಣ** | | | | | **ಪ್ರತಿಕ್ರಿಯೆ ಇಲ್ಲ** | **ಒಟ್ಟು ಶಾಲೆಗಳು** |
|---|---|---|---|---|---|---|---|
| | **ಪ್ರಾಥಮಿಕ ಮಾತ್ರ** | **ಹಿರಿಯ ಪ್ರಾಥಮಿಕದ ಜೊತೆ ಪ್ರಾಥಮಿಕ** | **ಹಿರಿಯ ಪ್ರಾಥಮಿಕದ ಜೊತೆ ಪ್ರಾಥಮಿಕ ಮತ್ತು ಮಾಧ್ಯಮಿಕ / ಹಿರಿಯ ಮಾಧ್ಯಮಿಕ** | **ಹಿರಿಯ ಪ್ರಾಥಮಿಕ ಮಾತ್ರ** | **ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ / ಹಿರಿಯ ಮಾಧ್ಯಮಿಕ** | | |
| **ಶಾಲೆಗಳ ಸಂಖ್ಯೆ** | 738,150 | 199,946 | 27,907 | 89,164 | 60,306 | 8,560 | 1,124,033 |
| **ಒಟ್ಟು ಶೇ. (%)** | 65.7 | 17.8 | 2.5 | 7.9 | 5.4 | 0.8 | 100.00 |
| **ಗ್ರಾಮಾಂತರ** | | | | | | | 87.23 |

ಮೂಲ: (ಕೋಷ್ಟಕ ಬಿ1), Mehta (ಮೆಹ್ತಾ), 2007

ಕೋಷ್ಟಕ 4ರಲ್ಲಿ ಕಂಡುಬರುವಂತೆ, ಎಲ್ಲಾ ಶಾಲೆಗಳ ಸಂಖ್ಯೆಯಲ್ಲಿ 2ನೇ 3ರಷ್ಟು ಭಾಗ ಮಾತ್ರ ಪ್ರಾಥಮಿಕ ಶಾಲೆಗಳಾಗಿವೆ, ಮತ್ತು 5 ರಲ್ಲಿ ಒಂದಕ್ಕಿಂತ ಕಡಿಮೆ (ಶೇ.17.8) ಪ್ರಾಥಮಿಕ ಶಿಕ್ಷಣವನ್ನು ಒದಗಿಸುತ್ತವೆ. 20 ರಲ್ಲಿ ಒಂದು ಶಾಲೆ ಮಾತ್ರ (ಶೇ. 5.4) ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಅವರ ಶಾಲಾ ಜೀವನವನ್ನು ಪೂರ್ಣಗೊಳಿಸಲು ಅವಕಾಶ ಮಾಡಿಕೊಡುತ್ತದೆ, ಅಲ್ಲದೆ ಶೇ.3 ಕ್ಕಿಂತ ಕಡಿಮೆ ಶಾಲೆಗಳು ಪ್ರಾಥಮಿಕದಿಂದ ಹಿರಿಯ ಮಾಧ್ಯಮಿಕದವರೆಗೆ ಶಾಲಾ ಜೀವನವನ್ನು ಪೂರ್ಣಗೊಳಿಸಲು ಅವಕಾಶ ಒದಗಿಸುತ್ತದೆ. ಮೊದಲನೇ ತರಗತಿಯನ್ನು ಸೇರುವ ಎಲ್ಲಾ ವಿದ್ಯಾರ್ಥಿಗಳಲ್ಲಿ ಶೇ.37 ರಷ್ಟು ಮಾತ್ರ 10ನೇ ತರಗತಿಯನ್ನು ತಲುಪುತ್ತಾರೆ (ಕೋಷ್ಟಕ 1ನ್ನು ನೋಡಿ)

ಬಿಜನೋರ್ ಪಟ್ಟಣ ಮತ್ತು ಅದರ ಸುತ್ತಲಿನ ಮಾಧ್ಯಮಿಕ ಶಾಲೆಗಳ ಅಧ್ಯಯನದಲ್ಲಿ ಜೇಫರಿ ಮತ್ತಿತರು (Jeffery et al)(2007), ಶಾಲೆಗಳ ಸಂಕೀರ್ಣತೆ ಮತ್ತು ಅವುಗಳ ವ್ಯವಸ್ಥೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರು ಅಧ್ಯಯನ ಮಾಡಿದ ಶಾಲೆಗಳು ಮೂರು ಮುಖ್ಯ ಪ್ರವರ್ಗಕ್ಕೆ ಸೇರುತ್ತವೆ:

- ಎರಡು ಬಗೆಯ ಹಿಂದಿ ಮಾಧ್ಯಮದ ಸರ್ಕಾರಿ ಶಾಲೆಗಳು: 55 ಕಿರಿಯ ಪ್ರೌಢಶಾಲೆಗಳು, ಹೆಚ್ಚಿನವು ಸಹ ಶಿಕ್ಷಣ ಹೊಂದಿದ್ದು, 6 ರಿಂದ 8ನೇ ತರಗತಿ ವರೆಗೆ ಮಾತ್ರ ಬೋಧನೆಗೆ ಒಳಪಟ್ಟಿದ್ದು; 6 ರಿಂದ 12ನೇ ತರಗತಿ ಹೊಂದಿರುವ ಎರಡು ಏಕಲಿಂಗ ಇಂಟರ್ ಮೀಡಿಯೆಟ್ ಕಾಲೇಜು ಮತ್ತು 6 ರಿಂದ 10ನೇ ತರಗತಿ ಹೊಂದಿರುವ ಒಂದು ಬಾಲಕಿಯರ ಮಾಧ್ಯಮಿಕ ಶಾಲೆ (ಮಿಡಲ್ ಸ್ಕೂಲ್), 6ನೇ ಅಥವಾ 9ನೇ ತರಗತಿಯನ್ನು ಸೇರಲು ಬಯಸುವವರಿಗೆ ಪರೀಕ್ಷೆಯ ಮೂಲಕ ಅಥವಾ 11ನೇ ತರಗತಿ ಸೇರುವವರಿಗೆ ಪಬ್ಲಿಕ್ ಬೋರ್ಡ್ ಪರೀಕ್ಷೆಯ ಫಲಿತಾಂಶ ಆಧರಿಸಿ ಪ್ರವೇಶಾತಿಯಿರುತ್ತದೆ.

- ಹಿಂದಿ ಮಾಧ್ಯಮದ ಅನುದಾನಿತ ಶಾಲೆಗಳು: ಬಿಜನೋರ್ ಪಟ್ಟಣದಲ್ಲೇ ಇರುವ 7 ಏಕ–ಲಿಂಗ ಶಾಲೆಗಳು (3 ಬಾಲಕರಿಗಾಗಿ, 4 ಬಾಲಕಿಯರಿಗಾಗಿ) ಮತ್ತು ಒಳನಾಡಿನಲ್ಲಿ 5 ಸಹ ಶಿಕ್ಷಣ ಶಾಲೆಗಳು ಇವೆ. ಬಾಲಕಿಯರು 8ನೇ ತರಗತಿಗೆ ತಮ್ಮ ವಿದ್ಯಾಭ್ಯಾಸ ನಿಲ್ಲಿಸಿದರೂ ಅಥವಾ 10 ಅಥವಾ 12ರವರೆಗೆ ಮುಂದುವರಿಸಿದರೂ ಹೆಚ್ಚಿನ ಬಾಲಕಿಯರ ಅನುದಾನಿತ ಶಾಲೆಗಳಲ್ಲಿ 6 ರಿಂದ 8ನೇ ತರಗತಿವರೆಗೆ ಮಾತ್ರ ಅನುದಾನ ಒದಗಿಸಲಾಗುತ್ತಿತ್ತು, ಆದರೆ 6 ರಿಂದ 10ನೇ ತರಗತಿ ಮತ್ತು ಹೆಚ್ಚಿನವು 12ನೇ ತರಗತಿವರೆಗೂ ಅನುದಾನಿತ ಬಾಲಕರ ಎಲ್ಲಾ ಶಾಲೆಗಳಿಗೂ ಅನುದಾನ ಒದಗಿಸಲಾಗುತ್ತಿತ್ತು.

- ಸಹ ಶಿಕ್ಷಣದ ಶಾಲೆಗಳೆಲ್ಲವೂ ಅನುದಾನ ಪಡೆಯದ ಶಾಲೆಗಳು: ಹೆಚ್ಚಿನವುಗಳು ಪ್ರಾಥಮಿಕ ತರಗತಿಗಳಿಂದ ಪ್ರಾರಂಭವಾಗಿ ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸ ಒದಗಿಸಲು ಸುಮಾರು 45 ಹಿಂದಿ ಮಾಧ್ಯಮ ಶಾಲೆಗಳು ನಿಧಾನಗತಿಯಲ್ಲಿ ವಿಸ್ತರಣೆಗೊಳ್ಳುತ್ತಿದೆ. 1987 ರಿಂದೀಚೆಗೆ ಆರು

ಇಂಗ್ಲಿಷ್ ಮಾಧ್ಯಮ ಶಾಲೆಗಳು ಸ್ಥಾಪಿತವಾಗಿದೆ. ಇವುಗಳೂ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸವನ್ನು ಒದಗಿಸುತ್ತಿವೆ ಮತ್ತು ಅವುಗಳು ಇತ್ತೀಚೆಗೆ ಸ್ಥಾಪಿತಗೊಂಡಿರುವುದರಿಂದ ಹಿರಿಯ ಮಾಧ್ಯಮಿಕ ತರಗತಿಗಳ ಬೋಧನೆಯನ್ನು 1995 ರಿಂದ ಪ್ರಾರಂಭಿಸಿವೆ (ಜೇಫರಿ ಮತ್ತಿತರರು, 2007:447).

ಈ ವ್ಯಾಪ್ತಿಯ ಶಾಲೆಗಳು ಉತ್ತರ ಪ್ರದೇಶದಲ್ಲಿನ ಹೆಚ್ಚಿನ ಭಾಗದ ಪರಿಸ್ಥಿತಿಯ ಪ್ರಾತಿನಿಧಿಕದಂತಿದೆಯೆಂದು ಜೇಫರಿ ಮತ್ತಿತರರು (2007) ವಿವರಿಸುತ್ತಾರೆ.

ಕೆಳಗಿನ ಕೋಷ್ಟಕ 5 ರಲ್ಲಿರುವಂತೆ ಶಾಲಾ ವ್ಯವಸ್ಥೆಯು ಒದಗಿಸುವವರ ಅಥವಾ ಆಡಳಿತ ವಿಧದ ಶಾಲೆಗೆ ಸಂಬಂಧಿಸಿದೆ. ಆಡಳಿತ ವಿಧದ ಜೊತೆಯಲ್ಲಿ ಅಡ್ಡ–ಕೋಷ್ಟಕ ಮಾಡಿರುವ ಶಾಲೆಗಳ ವರ್ಗೀಕರಣವನ್ನು ಕೋಷ್ಟಕ 5 ತೋರಿಸುತ್ತದೆ. ಶಿಕ್ಷಣ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಹೆಚ್ಚಿನ ಪ್ರಾಥಮಿಕ/ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮಾತ್ರ ಒದಗಿಸುತ್ತದೆ. ಅತ್ಯಧಿಕ ಸಂಖ್ಯೆಯ ಪರಿಪೂರ್ಣ ಶಾಲೆಗಳನ್ನು (ಹಿರಿಯ ಪ್ರಾಥಮಿಕದ ಜೊತೆಗೆ ಪ್ರಾಥಮಿಕ ಮತ್ತು ಮಾಧ್ಯಮಿಕ/ ಹಿರಿಯ ಮಾಧ್ಯಮಿಕ) ಖಾಸಗಿ ಕ್ಷೇತ್ರದಲ್ಲಿ ಒದಗಿಸಲಾಗಿದೆ.

**ಕೋಷ್ಟಕ 5: ಆಡಳಿತ ಮತ್ತು ವರ್ಗೀಕರಣ ಆಧರಿಸಿದ ಶಾಲೆಗಳ ಶೇಕಡಾವಾರು**

| **ಶಾಲಾ ವರ್ಗೀಕರಣ** | **ಶಾಲಾ ಆಡಳಿತ** | | | | | |
|---|---|---|---|---|---|---|
| | **ಶಿಕ್ಷಣ ಇಲಾಖೆ** | **ಬುಡಕಟ್ಟು / ಸಮಾಜ ಕಲ್ಯಾಣ ಇಲಾಖೆ** | **ಸ್ಥಳೀಯ ಸಂಸ್ಥೆ** | **ಖಾಸಗಿ ಅನುದಾನಿತ** | **ಖಾಸಗಿ ಅನುದಾನ ಪಡೆಯದ** | **ಇತರೆ ಆಡಳಿತ** |
| ಪ್ರಾಥಮಿಕ ಮಾತ್ರ | 63.4 | 4.9 | 21 | 2.9 | 7.2 | 0.56 |
| ಹಿರಿಯ ಪ್ರಾಥಮಿಕದ ಜೊತೆ ಪ್ರಾಥಮಿಕ | 44.0 | 2.2 | 28.3 | 5.4 | 19.6 | 0.45 |
| ಹಿರಿಯ ಪ್ರಾಥಮಿಕದ ಜೊತೆ ಪ್ರಾಥಮಿಕ ಮತ್ತು ಮಾಧ್ಯಮಿಕ/ ಹಿರಿಯ ಮಾಧ್ಯಮಿಕ | 29.1 | 3.8 | 3.8 | 12.9 | 48.0 | 2.28 |
| ಹಿರಿಯ ಪ್ರಾಥಮಿಕ ಮಾತ್ರ | 68.5 | 7.8 | 1.6 | 9.1 | 11.6 | 1.41 |
| ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ/ಹಿರಿಯ ಮಾಧ್ಯಮಿಕ | 37.1 | 2.8 | 15.3 | 29.5 | 14.4 | 0.87 |
| **ಎಲ್ಲಾ ಶಾಲೆಗಳು** | **57.6** | **4.5** | **19.8** | **5.6** | **11.2** | **0.67** |
| ಎಲ್ಲಾ ಶಾಲೆಗಳು (ಗ್ರಾಮಾಂತರ ಪ್ರದೇಶಗಳು) | 61.1 | 4.9 | 21.1 | 4.5 | 7.8 | 0.61 |

| | | | | | | |
|---|---|---|---|---|---|---|
| ಎಲ್ಲಾ ಶಾಲೆಗಳು (ನಗರ ಪ್ರದೇಶಗಳು) | 35.1 | 1.7 | 12.1 | 14.1 | 35.8 | 1.11 |

ಮೂಲ: ಕೋಷ್ಟಕ ಬಿ7, Mehta (ಮೆಹ್ತಾ), 2007

ಶಿಕ್ಷಣವನ್ನು ಖಾಸಗಿ ಕ್ಷೇತ್ರದಲ್ಲಿ ಒದಗಿಸುವವರು ನಗರ ಪ್ರದೇಶಗಳಲ್ಲಿ ಕೇಂದ್ರಿತವಾಗಿದ್ದಾರೆ ಮತ್ತು ಆ ರೀತಿಯ ಶಾಲೆಗಳು ನಗರ ಪ್ರದೇಶಗಳಲ್ಲಿ ಹೆಚ್ಚು ಕಡಿಮೆ ಅರ್ಧದಷ್ಟಿದೆ, ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು ಶೇ.12 ರಷ್ಟು ಶಾಲೆಗಳು ಮಾತ್ರ ಖಾಸಗಿ ಕ್ಷೇತ್ರದಲ್ಲಿ ಒದಗಿಸುವವರದ್ದಾಗಿದೆ ಎಂದೂ ಕೋಷ್ಟಕ 5 ತೋರಿಸುತ್ತದೆ.  ಖಾಸಗಿ ಶಾಲೆಗಳು ಹೆಚ್ಚಾಗಿ ನಗರ ಪ್ರದೇಶಕ್ಕೆ ಸಂಬಂಧಿಸಿದ ಸಂಗತಿಯೆಂದು ಜುನೇಜಾ(Juneja)(2005) ರವರು ಗಮನ ಸೆಳೆದಿದ್ದಾರೆ. ಹತ್ತು ನಗರಗಳ ಒಂದು ಅಧ್ಯಯನ (ಜುನೇಜಾ, 2001b)ದ ಪ್ರಕಾರ, ಪ್ರಾಥಮಿಕ ಹಂತದಲ್ಲಿ ನಗರ ಪ್ರದೇಶಗಳ ಖಾಸಗಿ ಕ್ಷೇತ್ರವು ಶಿಕ್ಷಣ ಒದಗಿಸುವವರಲ್ಲಿ ಪ್ರಮುಖವಾಗಿದೆ. ಆದರೂ ಜಿಲ್ಲಾ ಹಂತದಲ್ಲಿ ಆ ಪಾಲು ಕಡಿಮೆಯಾಗಿದೆ.  ಉದಾಹರಣೆಗೆ, 1998ರಲ್ಲಿ ಇಂದೋರ್ ಜಿಲ್ಲಾ ಹಂತದಲ್ಲಿ ಸರ್ಕಾರಿ ಶಾಲೆಗಳಿಗೂ ಖಾಸಗಿ ಆಡಳಿತದ ಶಾಲೆಗಳಿಗೂ ಇರುವ ಪಾಲು ಶೇ. 72.4 (ಸರ್ಕಾರಿ ಶಾಲೆ): ಶೇ. 27.6 (ಖಾಸಗಿ ಶಾಲೆ). ಇಂದೋರ್ ನಗರದಲ್ಲಿ 1999ರಲ್ಲಿ ಪರಿಸ್ಥಿತಿ ವಿರುದ್ಧವಾಗಿತ್ತು, ಅಲ್ಲಿ ಸರ್ಕಾರಿ ಶಾಲೆ ಹಾಗೂ ಖಾಸಗಿ ಆಡಳಿತ ಶಾಲೆಗಳಿಗಿರುವ ಪಾಲು ಶೇ. 32.6 (ಸರ್ಕಾರಿ ಶಾಲೆ): ಶೇ. 67.4 (ಖಾಸಗಿ ಶಾಲೆ) ಆಗಿತ್ತು. ಹತ್ತು ನಗರಗಳಲ್ಲಿನ ಅಧ್ಯಯನದಲ್ಲಿ, ಎಲ್ಲಾ ಶಾಲೆಗಳಿಗೆ ಹೋಲಿಸಿದಾಗ, ಖಾಸಗಿ ಪ್ರಾಥಮಿಕ ಶಾಲೆಗಳ ಪಾಲು ಕನಿಷ್ಟ ಶೇ. 38 (ಕೊಯಂಬತ್ತೂರು ನಗರ) ರಿಂದ ಗರಿಷ್ಟ ಶೇ.76 (ಕಾನ್ಪುರ ನಗರ)ರವರೆಗೆ ಇತ್ತು.

ಹಿರಿಯ ಪ್ರಾಥಮಿಕ ಹಂತದಲ್ಲಿ ಖಾಸಗಿ–ಅನುದಾನಿತ ಶಾಲೆಗಳ ಪ್ರಾತಿನಿಧ್ಯ ಹೆಚ್ಚಾಗಿದೆ. ಆದರೆ ಆ ಶಾಲೆಗಳ ಕೇವಲ ಶೇ.3 ಭಾಗ ಮಾತ್ರ ಪ್ರಾಥಮಿಕ ಶಾಲೆಗಳಾಗಿವೆ. ಅವುಗಳಲ್ಲಿ ಸುಮಾರು ಶೇ. 5 ರಷ್ಟು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಸೇರಿರುವ ಶಾಲೆಗಳಾಗಿವೆ, ಶೇ. 13 ಭಾಗದಷ್ಟು ಪರಿಪೂರ್ಣ ಶಾಲೆಗಳು ಮತ್ತು ಶೇ. 30 ರಷ್ಟು ಹಿರಿಯ ಪ್ರಾಥಮಿಕದಿಂದ ಮಾಧ್ಯಮಿಕದವರೆಗಿನ ಶಾಲೆಗಳಾಗಿವೆ.

DISE ಅಂಕಿ–ಅಂಶಗಳ ಪ್ರಕಾರ (ಮೆಹ್ತಾ, 2007), 604 ಜಿಲ್ಲೆಗಳಲ್ಲಿನ ಒಟ್ಟು 1,124,033 ಶಾಲೆಗಳಲ್ಲಿ ಸುಮಾರು 223,158 ಶಾಲೆಗಳು ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೆ ಒಳಪಟ್ಟಿವೆ.  ಕೆಲವು ರಾಜ್ಯಗಳಲ್ಲಿ ಆ ರೀತಿಯ ಶಾಲೆಗಳ ಶೇಕಡಾವಾರು ಸಂಖ್ಯೆಯು ಅಖಿಲ ಭಾರತ ಸರಾಸರಿಗಿಂತ ಹೆಚ್ಚಿನದ್ದಾಗಿದೆ.  ಉದಾಹರಣೆಗೆ, ಆಂಧ್ರ ಪ್ರದೇಶದಲ್ಲಿ ಈ ಶೇಕಡಾವಾರು ಹೆಚ್ಚೆಂದರೆ 72.8,

ಗುಜರಾತನಲ್ಲಿ 71.0, ಮಹಾರಾಷ್ಟ್ರದಲ್ಲಿ 69.1, ರಾಜಸ್ಥಾನದಲ್ಲಿ 32.1 ಮತ್ತು ತಮಿಳು ನಾಡಿನಲ್ಲಿ 56.3 ಆಗಿವೆ. ಇವುಗಳಲ್ಲಿನ ಎರಡು ರಾಜ್ಯಗಳು, ವಸಾಹತುಗಳ ಕಾಲದಿಂದ ಪ್ರಾಥಮಿಕ ಶಾಲೆಗಳನ್ನು ನಡೆಸುವ ಹೊಣೆ ಹೊತ್ತಿರುವ ಪುರಸಭೆಗಳನ್ನು ಹೊಂದಿರುವ 'ಪ್ರಾಂತೀಯ ನಗರ' ಗಳಾದ ಬೊಂಬಾಯಿ ಮತ್ತು ಮದ್ರಾಸಗಳನ್ನು ಒಳಗೊಂಡಿದೆ. ದೆಹಲಿಯು ಸ್ಥಳೀಯ ಸಂಸ್ಥೆಗಳ ಆಡಳಿತ ಹೊಂದಿರುವ ಶೇ. 39.8 ಶಾಲೆಗಳನ್ನು ಹೊಂದಿದೆ. ಉಳಿದ ರಾಜ್ಯಗಳು '0' ಯಿಂದ ಶೇ. 6.0 ಸ್ಥಳೀಯ ಆಡಳಿತ ನಡೆಸುತ್ತಿರುವ ಶಾಲೆಗಳನ್ನು ಹೊಂದಿದೆ.

### ೩.4 ಪುಟ್ಟ ಶಾಲೆಗಳು

100 ವಿದ್ಯಾರ್ಥಿಗಳಿಗಿಂತ ಕಡಿಮೆ ದಾಖಲಾತಿ ಹೊಂದಿರುವ ಅಗಾಧ ಸಂಖ್ಯೆಯ ಪುಟ್ಟ ಶಾಲೆಗಳು (ಎಲ್ಲಾ ಪ್ರಾಥಮಿಕ ಶಾಲೆಗಳ ಶೇ.55.3) ಇರುವುದನ್ನು DISE ಯು 2005-06ರಲ್ಲಿ ವರದಿ ಮಾಡಿದೆ. ಪುಟ್ಟ ಮತ್ತು ಅತಿ ದೂರದ ವಾಸಸ್ಥಳಗಳಲ್ಲಿ ಅಂತಹ ಶಾಲೆಗಳ ಇರುವಿಕೆಯು ಇತ್ತೀಚಿನ ವರ್ಷಗಳಲ್ಲಿ ಶಾಲೆ ಹೊರಗಿರುವ ಮಕ್ಕಳ ಸಂಖ್ಯೆಯು ಗಣನೀಯ ಇಳಿಕೆಗೆ ಸಹಾಯವಾಗಿದೆಯೆಂದು ಗೋವಿಂದಾ ಮತ್ತು ಬಿಸ್ವಾಲ್(Govinda and Biswal) (2006) ತಿಳಿಸಿರುತ್ತಾರೆ. ಆದರೆ, ಕಡಿಮೆ ಅರ್ಹತೆ ಹೊಂದಿರುವ, ಕಡಿಮೆ ಸಂಬಳ ಪಡೆಯುವ 'ಪಾರಾ-ಶಿಕ್ಷಕರು(para teachers)' ಹಲವು ಸಂದರ್ಭಗಳಲ್ಲಿ ಇಂತಹ ಮಕ್ಕಳಿಗೆ ಪಾಠ ಮಾಡುವ ಪರಿಸ್ಥಿತಿ ಉದ್ಭವಿಸಿದೆ. ಸಾಮಾನ್ಯವಾಗಿ ಕಡಿಮೆ ಸಂಬಳದ ಒಪ್ಪಂದಕ್ಕೆ ಒಳಗಾಗಿ, ಅರ್ಹತೆ ಹೊಂದಿರದೆ ಇರಬಹುದಾದ ಶಿಕ್ಷಕರನ್ನು ಪಾರಾ-ಶಿಕ್ಷಕರೆಂದು ಕರೆಯುತ್ತಾರೆ. ಅಗಾಧ ಸಂಪನ್ಮೂಲಗಳನ್ನು ಉಳಿಸಲು ಮತ್ತು ಶಿಕ್ಷಕರ ನಿರ್ವಹಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ದೂರವಿಡಲು ಕೆಲವು ರಾಜ್ಯ ಸರ್ಕಾರಗಳು ಇದರ ಕಡೆ ಒಲವು ತೋರಿಸುತ್ತವೆ. (Tilak (ತಿಲಕ್), 2004) ಗೋವಿಂದಾ ಮತ್ತು ಬಂಡೋಪಾಧ್ಯಾಯ (Govinda and Bandyopadhyay)(2008) ಇವರು 2ನೇ ಅಥವಾ 3ನೇ ತರಗತಿಗಳನ್ನು ಮೀರಿದಂತಹ ಶಾಲೆಗಳಲ್ಲಿನ ಮಕ್ಕಳ ಬಗ್ಗೆ ಮತ್ತು ಈ ಮಕ್ಕಳ ಶಿಕ್ಷಣದ ಮುಂದುವರಿಕೆಗಾಗಿ ಬೆಂಬಲಿಸುವ ವ್ಯವಸ್ಥೆಗಳನ್ನು ಕ್ರೋಡಿಕರಿಸುವುದು, ಯೋಜಿಸುವುದು ಮತ್ತು ರೂಪಿಸುವುದರ ಅಗತ್ಯದ ಬಗ್ಗೆ ಕಾಳಜಿ ವ್ಯಕ್ತಪಡಿಸುತ್ತಾರೆ: ಶೇ.27.4 ಸಣ್ಣ ಪ್ರಾಥಮಿಕ ಶಾಲೆಗಳು ನಗರ ಪ್ರದೇಶಗಳಲ್ಲಿರುವುದರಿಂದ ಅವು ಮುಖ್ಯವಾಹಿನಿಯ ಶಾಲೆಗಳೊಡನೆ ಸೇರ್ಪಡೆ ಆಗಲು ಸಾಧ್ಯವಾಗಬಹುದೆಂದು ಅವರು ಸಲಹೆಯನ್ನೂ ನೀಡುತ್ತಾರೆ.

ರಾಷ್ಟ್ರೀಯ ಶಿಕ್ಷಣ ನೀತಿ (ಭಾರತ ಸರ್ಕಾರ, 1986)ಯು ಪ್ರತಿಯೊಂದು ಪ್ರಾಥಮಿಕ ಶಾಲೆಯ ಜೊತೆ ಹಿರಿಯ ಪ್ರಾಥಮಿಕ ಶಾಲೆಗಳನ್ನು ಒದಗಿಸುವ ವಿಚಾರವನ್ನು ವ್ಯಕ್ತಪಡಿಸಿದರೂ ವಾಸ್ತವ ಸ್ಥಿತಿಯು ಸಾಕಷ್ಟು ಭಿನ್ನವಾಗಿದೆ. ಪ್ರಾಥಮಿಕ ಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಅನುಪಾತಗಳ ಅಂದಾಜಿನ ಪ್ರಕಾರ, ಪ್ರತಿಯೊಂದು 2.6 ಪ್ರಾಥಮಿಕ ತರಗತಿಗಳಿಗೆ ಅದೇ ಶಾಲೆಯಲ್ಲಿ ಒಂದೇ ಒಂದು ಹಿರಿಯ ಪ್ರಾಥಮಿಕ ತರಗತಿ ಲಭ್ಯವಿದೆಯೆಂದು ಕೋಷ್ಟಕ 6 ತಿಳಿಸುತ್ತದೆ. 2002–03ರಲ್ಲಿ ಇದೇ ಅನುಪಾತವು 3.2 ಆಗಿತ್ತೆಂದು ಮೆಹ್ತಾ (2007)ರವರು ವಿವರಿಸುತ್ತಾರೆ. ಹಾಗಾಗಿ, ಹಿರಿಯ ಪ್ರಾಥಮಿಕ ಶಾಲೆಗಳಿಗೆ ಹೊಂದಿಕೊಂಡಿಲ್ಲದಿರುವಂತಹ ಅನೇಕ ಪುಟ್ಟ ಪ್ರಾಥಮಿಕ ಶಾಲೆಗಳಿವೆ.

**ಕೋಷ್ಟಕ 6: ಒಂದೇ ಶಾಲೆಯಲ್ಲಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ವಿಭಾಗಗಳ ನಡುವಣ ಅನುಪಾತ (2005–06)**

| | **ಶಿಕ್ಷಣ ಇಲಾಖೆ** | **ಬುಡಕಟ್ಟು / ಸಮಾಜ ಕಲ್ಯಾಣ ಇಲಾಖೆ** | **ಸ್ಥಳೀಯ ಸಂಸ್ಥೆ** | **ಎಲ್ಲಾ ಸರ್ಕಾರಿ ಆಡಳಿತಗಳು** | **ಖಾಸಗಿ ಅನುದಾನಿತ** | **ಖಾಸಗಿ ಅನುದಾನ ಪಡೆಯದ** | **ಎಲ್ಲಾ ಖಾಸಗಿ ಆಡಳಿತ** | **ಎಲ್ಲಾ ಶಾಲೆಗಳು** |
|---|---|---|---|---|---|---|---|---|
| **ಅಖಿಲ ಭಾರತ** | 3.1 | 3 | 3.1 | 3.1 | 0.9 | 1.5 | 1.3 | 2.57 |
| **ಗ್ರಾಮಾಂತರ** | 3.2 | 3.0 | 3.2 | 3.2 | 0.9 | 1.6 | 1.3 | 2.79 |
| **ನಗರ** | 2.3 | 1.9 | 2.1 | 2.2 | 0.9 | 1.3 | 1.2 | 1.57 |


ಮೂಲ: ಕೋಷ್ಟಕ ಬಿ3, Mehta (ಮೆಹ್ತಾ), 2007


ಕೋಷ್ಟಕ 6 ರಲ್ಲಿರುವಂತೆ, ಖಾಸಗಿ ಆಡಳಿತದ ಆಶ್ರಯದಲ್ಲಿನ ಶಾಲೆಗಳಲ್ಲಿ ಕಡಿಮೆ ಅನುಪಾತ ಕಂಡು ಬರುತ್ತದೆ, ಆದರೆ ಸರ್ಕಾರಿ ಶಾಲೆಗಳಲ್ಲಿ ಅದು ಹೆಚ್ಚಿದೆ. ಕಡಿಮೆ ಪ್ರಾಥಮಿಕ ಶಾಲೆಗಳು ಹಿರಿಯ ಪ್ರಾಥಮಿಕ ಶಾಲೆಗಳನ್ನು ಅದೇ ಕಟ್ಟಡದಲ್ಲಿ ಹೊಂದಿರುವುದರಿಂದ ಸರ್ಕಾರಿ ಅಥವಾ ಖಾಸಗಿ ಶಾಲೆಗಳಿಗೆ ಹಾಜರಾಗುವ ಗ್ರಾಮಾಂತರ ಪ್ರದೇಶಗಳಲ್ಲಿನ ಮಕ್ಕಳಿಗೆ ಹಿರಿಯ ಪ್ರಾಥಮಿಕ ಶಾಲೆಗಳು ಹೆಚ್ಚು ದೂರದ್ದಾಗಿರುತ್ತದೆ.

**೩.೫ ಶಾಲಾ ವಿದ್ಯಾಭ್ಯಾಸದ ವೆಚ್ಚಗಳು**

3.6 '**ಶಾಲಾ ವಿದ್ಯಾಭ್ಯಾಸದ ವೆಚ್ಚಗಳು ಇರುವಷ್ಟು, ಶಾಲಾ ವಿದ್ಯಾಭ್ಯಾಸದಲ್ಲಿರುವ ವೈವಿಧ್ಯತೆಯನ್ನು ಬೇರಾವುದು ಒತ್ತಿಹೇಳುವುದಿಲ್ಲ**' (De et al (ಡೆ ಮತ್ತಿತರು), 2005:108). ಭಾರತದ ಹಿನ್ನಲೆಯಲ್ಲಿ ಈ ವಿಭಾಗವು ಈ ಹೇಳಿಕೆಯನ್ನು ಶೋಧಿಸುತ್ತದೆ.

**ಚಿತ್ರ 1:ಉಚಿತ ಶಿಕ್ಷಣಕ್ಕಿರುವ ಅವಕಾಶಗಳನ್ನು ಮಿತಿಗೊಳಪಡಿಸುವುದು: ಎಷ್ಟರ ಮಟ್ಟಿಗೆ ಶಾಲಾ ವಿದ್ಯಾಭ್ಯಾಸ ಉಚಿತವಾಗಿದೆ?**




ಅಂಕಿ–ಅಂಶ ಮೂಲ: ಭಾರತ ಸರ್ಕಾರ, 2007

1973–74 ರಿಂದ 2003–04ರ ವರೆಗಿನ 30 ವರ್ಷಗಳ ಅವಧಿಯಲ್ಲಿ ಕಡಿಮೆ ವೆಚ್ಚ/ ಉಚಿತ ಸರ್ಕಾರಿ–ಅನುದಾನಿತ ಕ್ಷೇತ್ರದಿಂದ ಒದಗಿಸುವವರ ನಡುವಿನ ಪಾಲಿನ ರೂಪದಲ್ಲಿ ಶಿಕ್ಷಣ ಅವಕಾಶವು ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿದೆ ಎಂದು ಚಿತ್ರ 1 ತೋರಿಸುತ್ತದೆ. ಆದರೆ ಖಾಸಗಿ ಅನುದಾನಿತ ಕ್ಷೇತ್ರವು (ಹೊರಿಸುವ ಶುಲ್ಕದ ಪ್ರಮಾಣಕ್ಕನುಗುಣವಾಗಿ) ಶೇಕಡಾವಾರು ಪಾಲಿನಲ್ಲಿ ಹೆಚ್ಚಳ ಪಡೆದಿದೆ ಎಂದೂ ಅದು ತೋರಿಸುತ್ತದೆ. ಖಾಸಗಿ ಅನುದಾನ ಪಡೆಯದ, ಶೇ. 6 ಕ್ಕಿಂತ ಕಡಿಮೆ ಮಾಧ್ಯಮಿಕ ಶಾಲೆಗಳು 1973–74ರಲ್ಲಿದ್ದರೆ, ಈ ರೀತಿ ಶುಲ್ಕ ಹೊರಿಸುವ ಶಾಲೆಗಳ ಪ್ರಮಾಣ 2003–04ರಲ್ಲಿ ಹೆಚ್ಚು ಕಡಿಮೆ ಎಲ್ಲಾ ಮಾಧ್ಯಮಿಕ ಶಾಲೆಗಳ 1/3 ಭಾಗದಷ್ಟಿತ್ತು. ಪ್ರೌಢಶಾಲಾ ಶಿಕ್ಷಣವನ್ನು ಪೂರ್ತಿಗೊಳಿಸುವ ಬಡವರ ಅವಕಾಶಗಳನ್ನು ಸೀಮಿತಗೊಳಿಸುವುದರ ಮೂಲಕ, ಮೂರು ದಶಕಗಳ ಅವಧಿಯಲ್ಲಿ, ಶುಲ್ಕ ಹೊರಿಸುವ ಅನುದಾನ ಪಡೆಯದ ಶಾಲೆಗಳು ಮಾಧ್ಯಮಿಕ ಶಿಕ್ಷಣ ಕ್ಷೇತ್ರದ 1/3 ಭಾಗದಷ್ಟು ಅವಕಾಶಗಳನ್ನು ಕಸಿದುಕೊಂಡಿದೆ (ಚಿತ್ರ 1 ನೋಡಿ).

1998–99ರ (IIPS (International Institute for Population Sciences - ರಾಷ್ಟ್ರೀಯ ಜನ ಸಂಖ್ಯಾ ವಿಜ್ಞಾನಕ್ಕಾಗಿ ಅಂತರರಾಷ್ಟ್ರೀಯ ಸಂಸ್ಥೆ), 2000)ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (NFHS(National Family Health Survey)–2)ಯು ತಿಳಿಸಿರುವಂತೆ ಆರ್ಥಿಕ ತೊಂದರೆಗಳಿಂದ ಅನೇಕ ಮಕ್ಕಳು ಶಾಲೆಗೆ ಹಾಜರಾಗಲು ಸಾಧ್ಯವಾಗುವುದೇ ಇಲ್ಲ. 6 ರಿಂದ 17 ವಯಸ್ಸಿನ ಜನಸಂಖ್ಯೆಯಲ್ಲಿ, ಶಾಲಾ ವ್ಯಾಸಂಗಕ್ಕೆ ತಗಲುವ ವೆಚ್ಚವು ಶಾಲೆಗೆ ಹಾಜರಾಗದಿರುವಿಕೆಗೆ ಇರುವ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಎಂದು ವರದಿಯಾಗಿದೆ. ಗ್ರಾಮಾಂತರ ಪ್ರದೇಶದ ಮಕ್ಕಳು (ಶೇ. 25.8 ಬಾಲಕರು ಮತ್ತು ಶೇ.2 3.8 ಬಾಲಕಿಯರು) ನಗರ ಪ್ರದೇಶಗಳಲ್ಲಿನ ಹೆಚ್ಚಿನ ಪ್ರಮಾಣದ ಮಕ್ಕಳಿಗೆ (ಶೇ. 28.5 ಬಾಲಕರು ಹಾಗೂ ಶೇ. 30.1 ಬಾಲಕಿಯರು) ಹೋಲಿಸಿದಾಗ ಶಾಲೆಯಿಂದ ಹೊರಗಿರಲು ವೆಚ್ಚವೇ ಪ್ರಮುಖ ಕಾರಣವೆಂದು ತಿಳಿಸಿರುತ್ತಾರೆ.

ಶಾಲೆಯ ಹೊರಗಿರುವ ಮಕ್ಕಳ ಅತ್ಯಧಿಕ ಜನಸಂಖ್ಯೆಗಳನ್ನು ಹೊಂದಿರುವ 8 ರಾಜ್ಯಗಳಲ್ಲಿನ ಸಮೀಕ್ಷೆಯನ್ನು ಆಧರಿಸಿ, ಕುಟುಂಬಗಳ ಮೇಲಿರುವ ಹಣಕಾಸಿನ ಹೊರೆ, ಸರ್ಕಾರಿ ಶಾಲೆಗಳಿಗೆ ಹೋಗುವ ಮಕ್ಕಳಿಗಿಂತ ಅನುದಾನಪಡೆಯದ ಖಾಸಗಿ ಶಾಲೆಗಳಿಗೆ ಹೋಗುವ ಮಕ್ಕಳ ಕುಟುಂಬಗಳ ಮೇಲೆ ಗಣನೀಯವಾಗಿ ಹೆಚ್ಚಿರುತ್ತದೆ ಎಂದು ಮೆಹ್ರೋತ್ರಾ ಮತ್ತು ಪಂಚಮುಖಿ (Mehrotra and Panchmukhi) (2006) ಇವರುಗಳು ಕಂಡುಕೊಂಡಿದ್ದಾರೆ. ನಗರ ಪ್ರದೇಶಗಳಲ್ಲಿನ ಹಣಕಾಸಿನ ಹೊರೆಯು (ಎಲ್ಲಾ ರೀತಿಯ ಶಾಲೆಗಳಿಗೆ) ಗ್ರಾಮಾಂತರ ಪ್ರದೇಶಗಳಿಗಿಂತ ಸಾಕಷ್ಟು ಅಧಿಕವಾಗಿದೆ. ಆಂಧ್ರ ಪ್ರದೇಶದಲ್ಲಿ, ಅನುದಾನ ಪಡೆಯದ ಖಾಸಗಿ

ಪ್ರಾಥಮಿಕ ಶಾಲೆಗೆ ಒಂದು ಮಗುವನ್ನು ಕಳುಹಿಸಲು ಕುಟುಂಬಕ್ಕೆ ತಗಲುವ ವಾರ್ಷಿಕ ವೆಚ್ಚವು ಸರ್ಕಾರಿ ಶಾಲೆಗಳಿಗಿಂತ 3.4ರಷ್ಟು ಹೆಚ್ಚಿತ್ತು, ಉಳಿದ ರಾಜ್ಯಗಳಲ್ಲಿ ಅದು ಎಲ್ಲಾದರೂ 1.4 ರಿಂದ 1.9ರ ಒಳಗಿತ್ತು. ನಗರ ಪ್ರದೇಶಗಳಲ್ಲಿ ವ್ಯತ್ಯಾಸವು 3.7ರಷ್ಟು ತಮಿಳುನಾಡಿನಲ್ಲಿ ಮತ್ತು 1.8 ಹಾಗೂ 2.7ರ ನಡುವೆ ಇತರ ರಾಜ್ಯಗಳಲ್ಲಿತ್ತು. ನಿಚ್ಚಳವಾಗಿ, ರಾಜ್ಯಗಳ ಗ್ರಾಮಾಂತರ ಸರ್ಕಾರಿ ಶಾಲೆಗಳಲ್ಲಿ ಒಂದು ಮಗುವಿಗೆ ತಗಲುವ ವಾರ್ಷಿಕ ವೆಚ್ಚವು ರೂ.891 ಹಾಗೂ ಅನುದಾನ ಪಡೆಯದ ಖಾಸಗಿ ಶಾಲೆಗಳಲ್ಲಿ ಅದು ರೂ.1,588 ಆಗಿತ್ತು. ನಗರ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಅದು ರೂ.1,100 ಆಗಿದ್ದರೆ, ಅನುದಾನ ಪಡೆಯದ ಖಾಸಗಿ ಶಾಲೆಗಳಲ್ಲಿನ ವೆಚ್ಚ ರೂ.2,268 ಆಗಿತ್ತು.

ಸರ್ಕಾರದಿಂದ ಪಾವತಿಸಲಾಗುತ್ತಿರುವ ಶಿಕ್ಷಕರ ಪ್ರಮಾಣದಲ್ಲಿನ ಇಳಿಕೆ ಮತ್ತು ಶಾಲಾ ಶುಲ್ಕದಲ್ಲಿನ ಏರಿಕೆಯ ಜೊತೆಯಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳು ಹೆಚ್ಚು ಖಾಸಗೀಕರಣಕ್ಕೆ ಒಳಪಡುತ್ತಿವೆ ಎಂದು ಜೇಫರಿ ಮತ್ತಿತರರು (2005:47) ತಿಳಿಸಿರುತ್ತಾರೆ. ಅಲ್ಲದೆ, ಎಲ್ಲಾ ಬಗೆಯ ಶಾಲೆಗೆ ಹೋಗುತ್ತಿರುವ ಮಕ್ಕಳು ಹೆಚ್ಚಾಗಿ ಖಾಸಗಿ ಶಿಕ್ಷಕರ ಸಹಾಯವನ್ನು ಪಡೆಯುತ್ತಿದ್ದಾರೆ. 1980ರ ಕೊನೆಯಿಂದೀಚೆಗೆ ಅನುದಾನ ಪಡೆಯದ ಶಾಲೆಗಳ ಸಂಖ್ಯೆಯು ಮತ್ತು ಅವುಗಳು ಬೋಧಿಸುತ್ತಿರುವ ವಿದ್ಯಾರ್ಥಿಗಳ ಪ್ರಮಾಣವು ತೀವ್ರವಾಗಿ ಹೆಚ್ಚಾಗಿದೆ. ಇದೇ ರೀತಿಯ ಬೆಳವಣಿಗೆಯು ಗ್ರಾಮಾಂತರ ಪ್ರದೇಶಗಳಲ್ಲಿದೆ ಎಂದು ಲೆಕ್ಲಾಸಿಕ್ಯೂ (Leclercq) (2003)ಕಂಡುಕೊಂಡರು. ಆದರೆ ಹೆಚ್ಚು ಬಡ ಪ್ರದೇಶವಾಗಿದ್ದ ಕಾರಣ ಖಾಸಗಿ ಶಾಲೆಗಳಲ್ಲಿನ ಶುಲ್ಕವು ಸ್ಥಳ ಹಾಗೂ ಸ್ಥಾನಮಾನಕ್ಕನುಗುಣವಾಗಿ ವ್ಯತ್ಯಾಸವಿದ್ದುದನ್ನೂ ಕಂಡುಕೊಂಡರು. ದಾಖಲಾತಿಯ ನಂತರ, ಮಾಸಿಕ ಹಾಗೂ ವಾರ್ಷಿಕ ಶುಲ್ಕದ ಜೊತೆಗೆ ನೂರಾರು ರೂಪಾಯಿಗಳನ್ನು ಸ್ವಯಂ 'ದೇಣಿಗೆ'ಯಾಗಿ ಕೊಡಬೇಕಾಗುತ್ತದೆಯೆಂದೂ ಅವರು ತಿಳಿಸಿರುತ್ತಾರೆ (ಲೆಕ್ಲಾಸಿಕ್ಯೂ, 2003:1867).

ಉತ್ತರಪ್ರದೇಶದ ಶಾಲೆಗಳ ನಮೂನೆ ಆಧರಿಸಿದ ಡೆ ಮತ್ತಿತರರ (2005) ಅಧ್ಯಯನದಂತೆ, ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಶಾಲಾ ಶುಲ್ಕ ಹಾಗೂ ವಿದ್ಯಾಭ್ಯಾಸದ ಒಟ್ಟು ವೆಚ್ಚವನ್ನು ಕೋಷ್ಟಕ 7 ತೋರಿಸುತ್ತದೆ. ಸರ್ಕಾರಿ ಶಾಲೆಗಳಲ್ಲೂ ಶಾಲಾ ವ್ಯಾಸಂಗದ ವೆಚ್ಚ ಅಧಿಕವಾಗಿರಲು ಸಾಧ್ಯವೆಂದು ಕೋಷ್ಟಕವು ತಿಳಿಸುತ್ತದೆ.

**ಕೋಷ್ಟಕ 7: ಶಾಲಾ ವಿದ್ಯಾಭ್ಯಾಸಕ್ಕಾಗಿ ಕುಟುಂಬದ ವಾರ್ಷಿಕ ಸರಾಸರಿ ವೆಚ್ಚ**

<table>
<tr><th></th><th colspan="4">ಇಲ್ಲಿ ಶಾಲಾ ವಿದ್ಯಾಭ್ಯಾಸಕ್ಕಾಗಿ ಕುಟುಂಬದ ವಾರ್ಷಿಕ ಸರಾಸರಿ ವೆಚ್ಚ</th></tr>
<tr><th></th><th colspan="2">ಪ್ರಾಥಮಿಕ ಹಂತ</th><th colspan="2">ಹಿರಿಯ ಪ್ರಾಥಮಿಕ ಹಂತ</th></tr>
<tr><th></th><th>ಶಾಲಾ ಶುಲ್ಕ</th><th>ಒಟ್ಟು ವೆಚ್ಚ *</th><th>ಶಾಲಾ ಶುಲ್ಕ</th><th>ಒಟ್ಟು ವೆಚ್ಚ *</th></tr>
<tr><td>ಸರ್ಕಾರಿ</td><td>47</td><td>499</td><td>107</td><td>1,579</td></tr>
<tr><td>ಖಾಸಗಿ (ಶುಲ್ಕ ರೂ.600 ರಿಂದ ಕೆಳಗೆ)</td><td>420</td><td>1,373</td><td rowspan="2">753</td><td rowspan="2">1,967</td></tr>
<tr><td>ಖಾಸಗಿ (ಶುಲ್ಕಗಳು ರೂ.600 ಮತ್ತು ರೂ.1,200 ಇವುಗಳ ಮಧ್ಯ)</td><td>857</td><td>2,427</td></tr>
<tr><td>ಖಾಸಗಿ (ಶುಲ್ಕ ರೂ.1,200 ಕ್ಕಿಂತ ಅಧಿಕ)</td><td>2,733</td><td>6,174</td><td>3,480</td><td>5,924</td></tr>
</table>

* ಶಾಲಾ ಶುಲ್ಕ, ಲೇಖನಾ ಸಾಮಗ್ರಿಗಳು, ಪಠ್ಯಪುಸ್ತಕ, ಸಮವಸ್ತ್ರ, ವಾಹನ, ಖಾಸಗಿ ಪಾಠ ಇವುಗಳಿಗಿನ ವೆಚ್ಚ, ಹಾಗೂ ಶಾಲಾ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಇತರೆ ಖರ್ಚುಗಳನ್ನು ಒಟ್ಟು ವೆಚ್ಚವು ಒಳಗೊಂಡಿದೆ.

ಮೂಲ: (De et al(ಡೆ ಮತ್ತಿತರರು), 2005

ಪ್ರಾಥಮಿಕ ಹಂತದಲ್ಲಿ ಸರ್ಕಾರಿ ಶಾಲೆಯ ವಿದ್ಯಾಭ್ಯಾಸಕ್ಕೆ ಕುಟುಂಬದ ಕನಿಷ್ಟ ಖರ್ಚು (ವಾರ್ಷಿಕ ರೂ.500) ಅಗತ್ಯವಾಗಿದೆ ಹಾಗೂ ವಿವಿಧ ರೀತಿಯ ಖಾಸಗಿ ಪ್ರಾಥಮಿಕ ಶಾಲೆಗಳಿಗನುಗುಣವಾಗಿ ಖರ್ಚು ತೀವ್ರವಾಗಿ ಏರಿಕೆಯಾಗುತ್ತದೆ ಎಂಬ ಸಂಗತಿಯನ್ನು ಈ ಅಧ್ಯಯನವು ಎತ್ತಿ ತೋರಿಸುತ್ತದೆ. ವಿದ್ಯಾಭ್ಯಾಸ ಶುಲ್ಕ ಮತ್ತು ಇತರ ವೆಚ್ಚಗಳ ನಡುವೆ ಒಂದು ಸುಮಾರಾದ ಅನುಪಾತ ಇದೆ. ಅಂದರೆ ಹೆಚ್ಚಿನ ವಿದ್ಯಾಭ್ಯಾಸ ಶುಲ್ಕ ವಿಧಿಸುವ ಶಾಲೆಗಳಲ್ಲಿ ಅನುಗುಣವಾದ ಶಾಲಾ ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚು ಅಗತ್ಯವಾಗಿರುತ್ತದೆ. ಉತ್ತಮ ಸಾಮಾಜಿಕ–ಆರ್ಥಿಕ ಹಿನ್ನಲೆಗಳುಳ್ಳ ಪೋಷಕರು ಹೆಚ್ಚಿನ ಶಾಲಾ ಶುಲ್ಕ ಭರಿಸುವ ಸಾಧ್ಯತೆಯಿದೆ. ಕೆಲವು ವೇಳೆ ಕುಟುಂಬದ ಕೆಲವು ಮಕ್ಕಳು ಮಾತ್ರ ಖಾಸಗಿ ಶಾಲೆಗಳಿಗೆ ಪ್ರವೇಶಾವಕಾಶ ಹೊಂದಿರುತ್ತಾರೆ.

> ಇಷ್ಟವಿದ್ದರೂ, ಬಡ ಪೋಷಕರು ಶುಲ್ಕ ಭರಿಸಲು ಸಾಧ್ಯವಿಲ್ಲದಿದ್ದಾಗ, ಅವರ ಕುಟುಂಬದಲ್ಲಿನ ಮಕ್ಕಳ ನಡುವೆ ತಾರತಮ್ಯ ಮಾಡುತ್ತಾರೆ. ಬಾಲಕಿಯರನ್ನು ದಾಖಲಾತಿ ಮಾಡದಿರುವುದು ಅಥವಾ ಅವರು ಸರ್ಕಾರಿ ಶಾಲೆಗಳಿಗೆ ಹೆಚ್ಚು ದೂರ ನಡೆಯುವಂತಹ ಮತ್ತು ಬಾಲಕರು ಖಾಸಗಿ ಶಾಲೆಗಳಿಗೆ ಹೋಗುವಂತಹ ಮಟ್ಟಕ್ಕೆ ತಾರತಮ್ಯದ ತೀವ್ರ ಪರಿಣಾಮ ಕೆಲವೊಮ್ಮೆ ಕುಟುಂಬದಲ್ಲಿ ಕಂಡುಬರುತ್ತದೆ (ಡೆ ಮತ್ತಿತರರು, 2005:108).

ಶಿಕ್ಷಣವು ಸಂಕಷ್ಟದ ಪರಿಸ್ಥಿತಿಯಿಂದ ಹೊರಬರಲು ಒಂದು ಮಾರ್ಗವೆಂದು ಪರಿಗಣಿಸುವುದರಿಂದ, ಬಡತನವಿದ್ದರೂ, ಅನೇಕರು ಮಾಧ್ಯಮಿಕ ಶಿಕ್ಷಣವನ್ನು ಪೂರ್ತಿಗೊಳಿಸಲು ಪ್ರಯತ್ನಿಸುತ್ತಾರೆ ಎಂಬ ಸಂಗತಿಯನ್ನು ಕೃಷ್ಣ ಮತ್ತು ಬೃಹ್ಮದೇಸಂ (Krishna and Brihmadesam) (2006) ಇವರುಗಳು ಎತ್ತಿ ತೋರಿಸಿದ್ದಾರೆ. ಅವರು ಉಲ್ಲೇಖಿಸಿರುವ ಪ್ರತಿಕ್ರಿಯೆ ನೀಡಿರುವವರೊಬ್ಬರ ವರದಿ ಹೀಗಿದೆ:

> ಸಾಮಾನ್ಯರಿಗಿಂತ ನಮ್ಮ ಪರಿಸ್ಥಿತಿಯು ಬಹಳ ಕೆಳಮಟ್ಟದಲ್ಲಿದೆ ಎಂದು ಹೇಳಬಹುದು. ಕೆಲವು ವೇಳೆ ನಾವು ಊಟಕ್ಕೆ ಒದ್ದಾಡುತ್ತಿದ್ದೆವು... ಮನೆಯಲ್ಲಿ ಹಣ ಇರುತ್ತಿರಲಿಲ್ಲ. ನನ್ನ ತಂದೆ ಅವರ ಸ್ನೇಹಿತರಿಂದ ಸ್ವಲ್ಪ ಹಣವನ್ನು ಸಾಲವಾಗಿ ಪಡೆದು ಆ ರಾತ್ರಿ ಅಡುಗೆಗೆ ಧಾನ್ಯ ತರುತ್ತಿದ್ದರು. ಅಲ್ಲಿಯವರೆಗೂ ನನ್ನ ತಾಯಿ ಧಾನ್ಯಕ್ಕಾಗಿ ಕಾಯುತ್ತಾ ಇದ್ದು ನಂತರ ಅಡುಗೆ ಮಾಡಿ ಮಲಗುತ್ತಿದ್ದಳು..... ಅವಳು ಒಂದು ವ್ಯವಸಾಯ ಕುಟುಂಬದ ಹಿನ್ನೆಲೆಯಿಂದ

> ಬಂದಿದ್ದವಳು. ವ್ಯವಸಾಯ ಮಾಡುವುದು ತುಂಬಾ ಕಷ್ಟವೆಂದು ಅವಳು ನಮಗೆ ತಿಳಿಸುತ್ತಿದ್ದಳು. 'ನೀನು ಓದುವುದು ಒಳ್ಳೆಯದು' ಎಂದು ಆಕೆ ನನಗೆ ಹೇಳುತ್ತಿದ್ದಳು. ವಾಸ್ತವವಾಗಿ, ಅವಳು ಚಿನ್ನದಸರ, ಕತ್ತಿನ ಸರವನ್ನು ಒಮ್ಮೆ ಮಾರಿದ್ದಳು. ಹಾಗೂ ನನ್ನ ಓದನ್ನು ಮುಂದುವರಿಸಲು ನನಗೆ ಆ ಹಣ ನೀಡಿದ್ದಳು... (ಕೃಷ್ಣ ಮತ್ತು ಬೃಹ್ಮದೇಸಂ, 2006:3312).

ಮೇಲೆ ಪ್ರತಿಕ್ರಿಯಿಸಿದ ವ್ಯಕ್ತಿಯು ಅಂತಿಮವಾಗಿ ಪ್ರೌಢಶಾಲೆ ಮತ್ತು ಉನ್ನತ ತಾಂತ್ರಿಕ ಶಿಕ್ಷಣವನ್ನು ಪೂರೈಸಿದನಾದರೂ, ಕುಟುಂಬದ ಬೆಂಬಲವಿದ್ದರೂ, ಶಿಕ್ಷಣದಲ್ಲಿ ಸಾಧನೆ ಮಾಡಬೇಕಾದರೆ ದೃಢ ನಿರ್ಧಾರದ ಅಗತ್ಯವಿದೆ ಎಂದು ಆತ ತೋರಿಸಿಕೊಡುತ್ತಾನೆ. ಪ್ರಾಥಮಿಕ ಹಂತದಲ್ಲಿ ಖಾಸಗಿ ಶಾಲೆಯ ಶುಲ್ಕ (ವಾರ್ಷಿಕ ಸುಮಾರು 1,400) ವನ್ನು ಕೊಡಲು ಕಷ್ಟಪಡುವ ಪೋಷಕರಿಗೆ ಹಿರಿಯ ಪ್ರಾಥಮಿಕ/ ಮಾಧ್ಯಮಿಕ ಹಂತಗಳಲ್ಲಿನ ಇನ್ನೂ ಅಧಿಕ ವೆಚ್ಚವನ್ನು ಭರಿಸಲು ಬಹುಶಃ ಹೆಚ್ಚಿನ ಕಷ್ಟ ಉಂಟಾಗಬಹುದೆಂದು ಡೆ ಮತ್ತಿತರರು(2005)ಒತ್ತಿ ಹೇಳುತ್ತಾರೆ. 'ತೇರ್ಗಡೆ ಆಗದಿರುವುದೂ ಈ ಖರ್ಚಿಗೆ ಸೇರಿಕೊಳ್ಳುತ್ತದೆ. ಈ ರೀತಿಯ ಕುಟುಂಬದಲ್ಲಿನ ಅನೇಕ ಮಕ್ಕಳು ಶಾಲೆ ಬಿಡಬೇಕಾಗುತ್ತದೆ. ಆದಾಗ್ಯೂ ಖಾಸಗಿ ಶಾಲೆಗಳಿಗೆ ಹೋಗುವ ಕೆಲವೇ ಮಕ್ಕಳು ಹೆಚ್ಚಿನ ಶುಲ್ಕ ಪಾವತಿ ಮಾಡುವಂತವರು' ಎಂದು ಅವರು ತಿಳಿಸುತ್ತಾರೆ (ಡೆ ಮತ್ತಿತರರು, 2005:109). 'ಶಾಲಾ ವಿದ್ಯಾಭ್ಯಾಸದ ಖರ್ಚುಗಳು ಹೊರತುಪಡಿಸುವ ಕೆಲವು ಪ್ರಮುಖವಾದ ಅಂಶಗಳಾಗಿವೆ, ಏಕೆಂದರೆ ಶಾಲೆಗಳು ಯಾವುದೇ ಆದರೂ ಖರ್ಚು ತುಂಬಾ ದುಬಾರಿಯಾಗಿರುತ್ತದೆ' (ಡೆ ಮತ್ತಿತರರು, 2005:109).

ಕಳೆದ 10 ವರ್ಷಗಳಲ್ಲಿ ಖಾಸಗಿ ಶಾಲೆಗಳನ್ನು ಪ್ರಾರಂಭಿಸಿರುವ ಮುಖ್ಯ ಕಾರಣಗಳೆಂದರೆ ಲಾಭಗಳಿಸುವುದು ಎಂದು ಜೇಫರಿ ಮತ್ತಿತರರು (2005) ತಿಳಿಸುತ್ತಾರೆ:

> ಈ ರೀತಿಯ ನಾಲ್ಕು ಶಾಲೆಗಳಾದರೂ ವಿದ್ಯಾವಂತ ಪತ್ನಿ ಅಥವಾ ಸೊಸೆ ಇವರುಗಳಿಗೆ ಉದ್ಯೋಗ ಮತ್ತು ವ್ಯಾಪಾರ ಅವಕಾಶಗಳನ್ನು ಒದಗಿಸಲೆಂದು ಅವರ ಕುಟುಂಬದವರಿಂದ ಸ್ಥಾಪಿಸಲಾಗಿದೆ. ಈ ಶಾಲೆಗಳ ವ್ಯವಸ್ಥಾಪಕರು ಸಾಮಾಜಿಕ ಬಾಧ್ಯತೆಗಳನ್ನು ಪೂರೈಸುವುದು ಮತ್ತು ಸಮಾಜ ಸೇವೆ ಕೈಗೊಳ್ಳುವುದೇ ಅವರ ಉದ್ದೇಶವಾಗಿದೆಯೆಂದು ಹೇಳಿಕೊಳ್ಳುತ್ತಾರೆ. ಬಹುಶಃ ಶಿಕ್ಷಣದಿಂದ ಲಾಭಗಳಿಸುವುದನ್ನು ಸಂವಿಧಾನವು ನಿಷೇಧಿಸಿರುವುದರಿಂದ ಹೀಗೆ ಮಾಡಲು ಕಾರಣವಾಗಿರಬಹುದು; ಏನೇ ಇರಲಿ, ಪ್ರವೇಶ ಶುಲ್ಕ

ಮುಂತಾದವುಗಳಿಂದ ಸಾಕಷ್ಟು ಹಣವನ್ನು ಜೇಬಿಗಿಳಿಸುತ್ತಾರೆ ಎಂಬ ಆಪಾದನೆಗಳಿಗೆ ವ್ಯವಸ್ಥಾಪಕರುಗಳು ವಿಪರೀತವಾಗಿ ಸೂಕ್ಷ್ಮರಾಗಿರುತ್ತಾರೆ (ಜೇಫರಿ ಮತ್ತಿತರು, 2005:54).

## 3.7 ಸೌಲಭ್ಯಗಳು ಮತ್ತು ಸಂಪನ್ಮೂಲಗಳು

ಕೋಷ್ಟಕ 8ರಲ್ಲಿ ತೋರಿಸಿರುವಂತೆ, ಕೆಲವು ಶಾಲೆಗಳಲ್ಲಿ ಅದರಲ್ಲೂ ಸರ್ಕಾರಿ ಶಾಲೆಗಳಲ್ಲಿ ಸಂಪನ್ಮೂಲಗಳು ಮತ್ತು ಸೌಲಭ್ಯಗಳು ಮಿತಿಗೆ ಒಳಪಟ್ಟಿರುತ್ತದೆ. 2005–06ರಲ್ಲಿ ಶೇ. 19 ಪ್ರಾಥಮಿಕ ಶಾಲೆಗಳು ಮಾತ್ರ ವಿದ್ಯುತ್ ಸಂಪರ್ಕ ಹೊಂದಿದ್ದವೆಂದು ಕೋಷ್ಟಕ 8 ರಲ್ಲಿ ತೋರಿಸಲಾಗಿದೆ. ಇದು ತೀವ್ರವಾಗಿ ಶಾಲೆಗಳು ಸಾಧಿಸಬಹುದಾದನ್ನು ಮಿತಿಗೊಳಿಸುತ್ತದೆ. ಕೇವಲ 15 ರಾಜ್ಯಗಳಲ್ಲಿ ಮಾತ್ರ ಒಟ್ಟು ಶಾಲಾ ಸಂಖ್ಯೆಯ ಶೇ.50 ಕ್ಕಿಂತ ಹೆಚ್ಚಿನ ಶಾಲೆಗಳು ವಿದ್ಯುತ್ ಸಂಪರ್ಕ ಹೊಂದಿದ್ದವೆಂದು ಮೆಹ್ತಾ (2007)ಗಮನ ಸೆಳೆಯುತ್ತಾರೆ.

**ಕೋಷ್ಟಕ 8: 2005–06ರಲ್ಲಿ ವಿದ್ಯುತ್ ಸಂಪರ್ಕ ಹೊಂದಿರುವ ಶೇಕಡಾವಾರು ಶಾಲೆಗಳು**

| ಶಾಲೆಯ ವರ್ಗೀಕರಣ | ಶೇಕಡಾವಾರು | | | | | | | |
|---|---|---|---|---|---|---|---|---|
| | ಎಲ್ಲಾ ಪ್ರದೇಶಗಳು | | | | ಗ್ರಾಮಾಂತರ ಪ್ರದೇಶಗಳು | ನಗರ ಪ್ರದೇಶಗಳು | ಸರ್ಕಾರಿ ಶಾಲೆ | ಖಾಸಗಿ ಶಾಲೆ |
| | 2002–03 | 2003–04 | 2004–05 | 2005–06 | | | | |
| ಪ್ರಾಥಮಿಕ ಮಾತ್ರ | 12.24 | 14.57 | 17.23 | 18.82 | 15.52 | 52.84 | 14.20 | 60.13 |
| ಹಿರಿಯ ಪ್ರಾಥಮಿಕದ ಜೊತೆ ಪ್ರಾಥಮಿಕ | 45.99 | 50.74 | 52.10 | 53.79 | 47.74 | 80.47 | 45.75 | 77.81 |
| ಹಿರಿಯ ಪ್ರಾಥಮಿಕದ ಜೊತೆ ಪ್ರಾಥಮಿಕ ಮತ್ತು ಮಾಧ್ಯಮಿಕ/ ಹಿರಿಯ ಮಾಧ್ಯಮಿಕ | 73.71 | 75.44 | 78.37 | 79.22 | 70.70 | 93.00 | 64.93 | 88.40 |
| ಹಿರಿಯ ಪ್ರಾಥಮಿಕ ಮಾತ್ರ | 18.93 | 20.91 | 22.80 | 26.09 | 21.14 | 70.91 | 20.66 | 46.92 |
| ಹಿರಿಯ ಪ್ರಾಥಮಿಕ ಮತ್ತು | 74.25 | 77.86 | 77.45 | 78.31 | 73.24 | 93.19 | 72.50 | 85.71 |

| | | | | | | | | |
|---|---|---|---|---|---|---|---|---|
| ಮಾಧ್ಯಮಿಕ / ಹಿರಿಯ ಮಾಧ್ಯಮಿಕ | | | | | | | | |
| **ಎಲ್ಲಾ ಶಾಲೆಗಳು** | 21.64 | 25.23 | 28.37 | 30.39 | 25.08 | 69.20 | 22.51 | 69.78 |

ಮೂಲ: ಕೋಷ್ಟಕ ಸಿ6, ಮೆಹ್ತಾ, 2007

***

**ಟಿಪ್ಪಣಿ**

- CREATE ಬಗ್ಗೆ ಹೆಚ್ಚಿನ ಮಾಹಿತಿಗೆ ನೋಡಿ www.create-rpc.org Lewin (ಲೂವೆನ್)(2007) ರವರು CREATE ನ ಹಿಂದಿರುವ ಚಿಂತನೆ ಹಾಗೂ ಪರಿಕಲ್ಪನಾ ಚೌಕಟ್ಟನ್ನು ಒದಗಿಸುತ್ತಾರೆ.